ದೆಹಲಿ ಕರ್ನಾಟಕ ಸಂಘದ

# ಅಭಿಮತ

ಜನವರಿ 2016
ಬೆಲೆ ರೂ. 1



## 2016 ಹೊಸ ವರ್ಷದ ಹಾರ್ದಿಕ ಶುಭಾಶಯಗಳು

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 26 ಸಂಚಿಕೆ 4
ಜನವರಿ 2016, ಬೆಲೆ ರೂ. 1


## ನೇರ ಮಾತು

ಏರಿಳಿತಗಳು ಪ್ರಕೃತಿಯ ನಿಯಮ. ಜಗತ್ತಿನ ಎಲ್ಲಾ ಶಕ್ತಿಗಳು, ವ್ಯಕ್ತಿಗಳು, ಸಂಸ್ಥೆಗಳು, ಪ್ರದೇಶ, ದೇಶಗಳು ಒಂದಿಲ್ಲೊಂದು ರೀತಿಯ ಏರು ಪೇರುಗಳನ್ನು ಕಾಣುತ್ತಲೇ ಬೆಳೆದು ಬಂದಿರುತ್ತವೆ. 2015 ಇಂತಹ ಹಲವು ಮಹತ್ವದ ಏರು ಪೇರಿನ ಘಟನೆಗಳನ್ನು ಕಂಡಿತು. ವಿಶ್ವದ ಹಲವೆಡೆ ಅಹಿಂಸಾ ಘಟನೆಗಳು ನಡೆದು ಮನುಕುಲದ ಬುಡಕ್ಕೆ ಕೊಡಲಿ ಪೆಟ್ಟಿಟ್ಟವು. ಪ್ರಕೃತಿಯ ವಿಕೋಪ ಮನುಕುಲವನ್ನು ನಡುಗಿಸಿದರೆ ಮಾನವನ ಹೊಸ ಹೊಸ ಆವಿಷ್ಕಾರಗಳು ಭವಿಷ್ಯಕ್ಕೆ ಉಜ್ವಲ ಬೆಳಕನ್ನು ಚೆಲ್ಲಿವೆ. ಬೆಳೆಯುವ ಎಲ್ಲಾ ಕ್ರಿಯೆಯು ಅನಿವಾರ್ಯವಾಗಿ ಇಂತಹ ಸವಾಲುಗಳನ್ನು ಎದುರಿಸಲೇ ಬೇಕಾಗುತ್ತದೆ.

ಕರ್ನಾಟಕದ ನಾಡು–ನುಡಿ ಜನಮನಗಳಲ್ಲೂ ಇಂತಹ ಹಲವು ಮಹತ್ತರ ಘಟನೆಗಳು ಸಂಭವಿಸಿವೆ. ಕಾವೇರಿಯಲ್ಲಿ ಸಾಕಷ್ಟು ನೀರು ಹರಿದು ಹೋಗಿದೆ. ಹಲವಾರು ಕನ್ನಡದ ದಿಗ್ಗಜರನ್ನು ಕಳಕೊಂಡು ನಾಡು ಬಡವಾಗಿದೆ. ವಿಶ್ವವಿಖ್ಯಾತ ಮೈಸೂರು ಮಲ್ಲಿಗೆ, ಕೊಡಗಿನ ಕಾಫಿ, ಶ್ರೀಗಂಧ ಸದಾ ಎಂದಿನಂತೆ ಘಮಘಮಿಸುತ್ತಿವೆ. ನದಿ ನೀರು, ಭಾಷೆ, ಅಧಿಕಾರ, ಆದಾಯ, ನ್ಯಾಯ ಹಂಚಿಕೆಗಳ ಕುರಿತಾಗಿ ಸಾಕಷ್ಟು ವಾದ ವಿವಾದಗಳು ನಡೆದಿವೆ. ಕನ್ನಡ ತಾಯಿಯ ಮಡಿಲ ಕನಸಾದ 'ಮರೆತೆಯಾದರೆ ಅಯ್ಯೋ, ಮರೆತಂತೆ ನನ್ನ' ಎಂಬ ಜೋಗುಳದ ಹಾಡಿನ ಅಲೆ ಏಕೋ ಕ್ಷೀಣವಾದಂತೆ ಅನ್ನಿಸುತ್ತಿದೆ. ಪಾಶ್ಚಿಮಾತ್ಯ ಸಂಸ್ಕೃತಿಗೆ ಜೋತುಬಿದ್ದು, ಜೀವನದುದ್ದಕ್ಕೂ ಬೇಕುಗಳ ಸಂತೆ ಅತಿಯಾಗಿ ಎಲ್ಲಾ ಮಾನವ ಮೌಲ್ಯಗಳನ್ನು ಎಲ್ಲೋ ಬದಿಗಿಟ್ಟಂತೆ ಭಾಸವಾಗುತ್ತಿದೆ.

ಅತಿಯಾದ ನಗರೀಕರಣ, ಔದ್ಯೋಗಿಕರಣ ಹಾಗೂ ಜಾಗತೀಕರಣದ ಪರಿಣಾಮವಾಗಿ ಭೂಮಿ ಬಿಸಿಯಾಗುತ್ತಿದೆ, ವಾತಾವರಣ ಕಲುಷಿತಗೊಳ್ಳುತ್ತಿದೆ, ನಗರಗಳಲ್ಲಿ ಸಾರಿಗೆ ಸಂಪರ್ಕ ಕಷ್ಟವಾಗುತ್ತಿದೆ, ದೆಹಲಿಯಂತಹ ಮಹಾನಗರ ಸಮ–ಬೆಸ ಸಂಖ್ಯೆಗಳ ವಾಹನ ಸಂಚಾರ ನಿಯಂತ್ರಣದ ಪ್ರಾಯೋಗಿಕ ಘಟ್ಟದಲ್ಲಿದೆ. ಕರ್ನಾಟಕದ ರಾಜಧಾನಿ ಬೆಂಗಳೂರಿಗೂ ಈ ಪದ್ಧತಿ ಅನಿವಾರ್ಯ ಎನ್ನಿಸುತ್ತಿದೆ. ಮುಂದಿನ ಪೀಳಿಗೆಗೆ ಶುದ್ಧ ಗಾಳಿ, ನೀರು ಹಾಗೂ ಭಾಷೆ ನೀಡುವುದು ನಮ್ಮ ನಿಮ್ಮೆಲ್ಲರ ಜವಾಬ್ಧಾರಿಯಾಗಿದೆ. ಸರ್ಕಾರ, ಸಂಘ ಸಂಸ್ಥೆಗಳು, ಪ್ರತಿಯೊಬ್ಬ ವ್ಯಕ್ತಿ ಕೂಡಾ ಈ ನಿಟ್ಟಿನಲ್ಲಿ ಚಿಂತಿಸಿ, ಈ ಹೊಸ ವರ್ಷದ ಸಂದರ್ಭದಲ್ಲಿ ಪ್ರತಿಜ್ಞೆ ಮಾಡಬೇಕಾಗಿದೆ. ಮುಂದಿನ ಜನಾಂಗಕ್ಕೆ ಧಕ್ಕೆಯಾಗದ ರೀತಿಯಲ್ಲಿ ನಾವು ಇಂದಿನ ಸಂಪನ್ಮೂಲಗಳನ್ನು ಬಹಳ ಜಾಗರೂಕತೆಯಿಂದ ಉಪಯೋಗಿಸಿಕೊಂಡು ನಮ್ಮ ಜೀವನದ ಜೊತೆಗೆ ಭವಿಷ್ಯದ ಜೀವನ ಕೂಡಾ ಹಸನಾಗುವಂತೆ ವರ್ತಿಸಬೇಕಾಗಿದೆ.

ತಮಗೆಲ್ಲರಿಗೂ ಹೊಸ ವರ್ಷದ ಹಾರ್ದಿಕ ಶುಭಾಶಯಗಳೊಂದಿಗೆ ಕರ್ನಾಟಕ ಸಂಘ ಈ ನಿಟ್ಟಿನಲ್ಲಿ ಸದಾ ಕಂಕಣಬದ್ಧವಾಗಿದೆ ಎಂದು ಘೋಷಿಸುತ್ತೇವೆ. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***

## ಮುನ್ನೋಟ

ಆತ್ಮೀಯ ದೆಹಲಿ ಕರ್ನಾಟಕ ಸಂಘದ ಸದಸ್ಯರುಗಳಿಗೆ, ಹೊಸ ವರ್ಷದ ಹಾಗೂ ಸಂಕ್ರಾಂತಿಯ ಶುಭಾಶಯಗಳು.

ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆ ಜೊತೆಗೆ ಈ ತಿಂಗಳ 31ರಂದು ಐತಿಹಾಸಿಕ ಪ್ರಸಿದ್ಧ ಸ್ಥಳವಾದ ಹಸ್ತಿನಾಪುರಕ್ಕೆ ಪಿಕ್‌ನಿಕ್ ಆಯೋಜಿಸುವ ಯೋಚನೆ ಇದೆ. ಹೋಗಿ ಬರುವ ಪ್ರಯಾಣದ ವ್ಯವಸ್ಥೆಯನ್ನು ಸಂಘವು ಮಾಡುತ್ತದೆ. ಸದಸ್ಯರು ರೂ. 300/–ನ್ನು ನೀಡಬೇಕಾಗುತ್ತದೆ. ಉಳಿದ ಹಣ ಮತ್ತು ಎರಡು ಸಮಯದ ಊಟದ ವ್ಯವಸ್ಥೆಯನ್ನು ಸಂಘವು ಮಾಡುತ್ತದೆ.

ಸದಸ್ಯರ ಒತ್ತಾಯದ ಮೇರೆಗೆ ಸಂಘದಲ್ಲಿ ದೆಹಲಿಯ ಸ್ಥಳೀಯರಿಂದ ಕರ್ನಾಟಕದ ವಿವಿಧ ಜಿಲ್ಲೆಗಳ ನಾನಾ ರೀತಿಯ ಆಹಾರ ಪದಾರ್ಥಗಳು ಮತ್ತು ತಿಂಡಿ ತಿನಿಸುಗಳ ಮೇಳವನ್ನು ಫೆಬ್ರವರಿ 21ರಂದು ಆಯೋಜಿಸಿದೆ. ಈ ಮೇಳದಲ್ಲಿ ಆಹಾರ ಪದಾರ್ಥಗಳ ಮಾರಾಟ ಮತ್ತು ಪ್ರದರ್ಶನವು ಬೆಳಿಗ್ಗೆ 11 ರಿಂದ ಸಂಜೆ 6ರವರೆಗೆ ನಡೆಯಲಿದೆ. ಸಂಘವು ಸುಮಾರು 25 ಕೌಂಟರ್‌ಗಳ ವ್ಯವಸ್ಥೆಯನ್ನು ಮಾಡುವುದು, ಆಸಕ್ತಿಯುಳ್ಳವರು ತಮ್ಮ ಹೆಸರುಗಳನ್ನು ಸಂಘದಲ್ಲಿ ನೋಂದಾಯಿಸಬಹುದು. 2015–16ನೇ ಸಾಲಿನ ವಿದ್ಯಾರ್ಥಿವೇತನವನ್ನು ನೀಡಲು ತೀರ್ಮಾನಿಸಿದೆ. ಸಂಘದ ಕಚೇರಿಯಿಂದ ಜನವರಿ 30ರ ಒಳಗಾಗಿ ಅರ್ಜಿಗಳನ್ನು ಪಡೆಯಬಹುದು. ಅರ್ಜಿಗಳನ್ನು ಸಲ್ಲಿಸಲು ಜನವರಿ 31 ಕೊನೆಯ ದಿನವಾಗಿರುತ್ತದೆ. ವಾರ್ಷಿಕ ಆಟೋಟ ಸ್ಪರ್ಧೆಗಳು ಮತ್ತು ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಯು ಜನವರಿ ತಿಂಗಳ ಕೊನೆಯ ಶನಿವಾರದಂದು ಆರಂಭಗೊಂಡು ಫೆಬ್ರವರಿ 14, 2016ರವರೆಗೆ ನಡೆಯಲಿದೆ.

ರೂಪಾಂತರ ಬೆಂಗಳೂರು ತಂಡದಿಂದ ನಾಟಕ 'ಚಕ್ರರತ್ನ' ಜನವರಿ 24ರಂದು ನಡೆಯಲಿದೆ. ಬನ್ನಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಿ ಅ

***ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ***


**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಆಶಾಲತಾ ಎಂ.: 9891249149
ಎಸ್.ಸಿ. ಹೇಮಲತ: 9971121636

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ: 9811325440

**ಕೋಶಾಧಿಕಾರಿ**
ಕೆ.ಎಸ್.ಜಿ. ಶೆಟ್ಟಿ 9810232113

**ಜಂಟಿ ಕಾರ್ಯದರ್ಶಿಗಳು**
ಟಿ.ಪಿ. ಬೆಳ್ಳಿಯಪ್ಪ: 9654555795
ಜಮುನಾ ಸಿ. ಮಠದ: 9717146597

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್: 9811689337
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಸಖಾರಾಮ ಉಪ್ಪೂರು 9958807225
ಸುಮಿತಾ ಮುರಗೋಡ 9873000333
ಶಶಿಕಾಂತ್ ಪಾಟಿಲ್ 9650182413
ಬಾಬುರಾಜ್ ಪೂಜಾರಿ 9818807696
ಎಸ್. ಪರಮೇಶ್ 9015332380
ತ್ಯಾಗೇಶ್ ಮೂರ್ತಿ 9868393961

**ವಿಶೇಷ ಆಹ್ವಾನಿತರು**
ಐ. ರಾಮ ಮೋಹನ್ ರಾವ್
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

**ಕಾವಲು ಸಮಿತಿ**
ಬಸವರಾಜ್ ಎಸ್. ಕಲ್ಲೂರು
ಎನ್.ಎ. ಮಾಧವ
ಡಾ. ಅಹಲ್ಯಾ ಚಿಂತಾಮಣಿ




DELHI KARNATAKA *SANGHA* Rao Tularam Marg, Sector-12, R K Puram, New Delhi-110022.
Phone: 011-26109615. 011-65643615 email:dksangha@gmail.com

## ದೆಹಲಿ ಕರ್ನಾಟಕ ಸಂಘದಲ್ಲಿ ತಿಂಗಳ ಕಾರ್ಯಕ್ರಮ

**16 ಜನವರಿ 2016** **ಶನಿವಾರ, ಸಂಜೆ 6.00ಗಂಟೆಗೆ**

ಪರಸ್ಪರ ಜಾನಪದ ಕಲಾ ತಂಡದಿಂದ **ಕಂಸಾಳೆ** ಮತ್ತು ಪರಸ್ಪರ ಆರ್ಟ್ ಫೌಂಡೇಶನ್‌ನಿಂದ ಮಹಾಕವಿ ಬಾಸನ ರಚಿತ ನಾಟಕ **'ಮಧ್ಯಮ ವ್ಯಾಯೋಗ'**, **ನಿರ್ದೇಶನ :** ಮಂಜುನಾಥ ಬೆಳಕೆರೆ

**24 ಜನವರಿ 2016** **ಭಾನುವಾರ, ಸಂಜೆ 5.00ಗಂಟೆಗೆ**

ರೂಪಾಂತರ ತಂಡ, ಬೆಂಗಳೂರು ಪ್ರಸ್ತುತಪಡಿಸುವ ನಾಟಕ **'ಚಕ್ರರತ್ನ'**, **ರಚನೆ :** ಡಾ. ಕೆ.ವೈ. ನಾರಾಯಣ ಸ್ವಾಮಿ, **ನಿರ್ದೇಶನ :** ಕೆ.ಎಸ್.ಡಿ.ಎಲ್. ಚಂದ್ರು

**21 ಫೆಬ್ರವರಿ 2016** **ಭಾನುವಾರ, ಬೆಳಿಗ್ಗೆ 11.00ರಿಂದ**

ಫುಡ್ ಫೆಸ್ಟಿವಲ್ (ಆಹಾರ ಮೇಳ) ಬೊಂಬೆ ಕುಣಿತ ಮತ್ತು ತಮಟೆ ವಾದನ

### ಪಿಕ್‌ನಿಕ್





ದೆಹಲಿ ಕರ್ನಾಟಕ ಸಂಘವು ಜನವರಿ 31, 2016ರಂದು ಹಸ್ತಿನಾಪುರಕ್ಕೆ ಪಿಕ್‌ನಿಕ್ ಆಯೋಜಿಸಿದೆ. ಹೋಗಿ ಬರಲು ಬಸ್ಸಿನ ವ್ಯವಸ್ಥೆ, ಬೆಳಗ್ಗಿನ ಉಪಹಾರ, ಮಧ್ಯಾಹ್ನ ಹಾಗೂ ರಾತ್ರಿ ಊಟ, ಸಂಜೆ ಟೀ ವ್ಯವಸ್ಥೆ ಮಾಡಲಾಗುವುದು. ಇದಕ್ಕೆ ತಗಲುವ ವೆಚ್ಚ ಸೇವಾ ತೆರಿಗೆ ಸೇರಿ ಅಂದಾಜು ತಲಾ ಒಬ್ಬರಿಗೆ ರೂ. 750/–.
ಸದಸ್ಯರು ರೂ. 300/– ಭರಿಸಬೇಕಾಗುವುದು. ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ. ಹೆಚ್ಚಿನ ಮಾಹಿತಿಗಳಿಗೆ ಸಂಪರ್ಕಿಸಿ : ಶ್ರೀ ವಿ.ವಿ. ಬಿರಾದಾರ ಅಧ್ಯಕ್ಷರು, ಪಿಕ್‌ನಿಕ್ ಸಮಿತಿ–9873005409, ಶ್ರೀ ರಾಧಾಕೃಷ್ಣ, ಸಂಚಾಲಕರು–9818252183 ಮತ್ತು ಸಂಘದ ಕಚೇರಿ : 26109615 / 26104818

### ಆಹಾರ ಮೇಳ





ಫೆಬ್ರವರಿ 21, 2016ರಂದು ಸಂಘದ ಆವರಣದಲ್ಲಿ ದೆಹಲಿಯ ಸ್ಥಳೀಯರಿಂದ ಕರ್ನಾಟಕದ ವಿವಿಧ ಜಿಲ್ಲೆಗಳ ನಾನಾ ರೀತಿಯ ಆಹಾರ ಪದಾರ್ಥಗಳು ಮತ್ತು ತಿಂಡಿತಿನಿಸುಗಳ ಮೇಳವನ್ನು ಮಾಡಲು ನಿರ್ಧರಿಸಿದೆ. ಪ್ರದರ್ಶನ ಸಮಯ ಬೆಳಿಗ್ಗೆ 11.00ರಿಂದ ಸಂಜೆ 6.00ರವರೆಗೆ. ಕೌಂಟರ್ ವ್ಯವಸ್ಥೆ, ಅಲಂಕಾರ, ಟೆಂಟ್ ಹೌಸ್ ಸಾಮಾನು, ಪ್ರಚಾರ, ಬ್ಯಾನರ್‌ಗಳನ್ನು ಸಂಘವು ಒದಗಿಸುವುದು. ಹೆಚ್ಚಿನ ಮಾಹಿತಿಗಾಗಿ ಆಸಕ್ತಿಯುಳ್ಳವರು ಸಂಪರ್ಕಿಸಿ : ಶ್ರೀ ರಾಧಾಕೃಷ್ಣ, ಅಧ್ಯಕ್ಷರು, ಆಹಾರ ಮೇಳ–9818252183 ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ–9811325440, ಸಂಘದ ಕಚೇರಿ–26109615 / 26104818.

**30, 6,7,13 ಮತ್ತು 14** **ಜನವರಿ ಮತ್ತು ಫೆಬ್ರವರಿ 2016**

ದೆಹಲಿ ಕರ್ನಾಟಕ ಸಂಘವು ವಾರ್ಷಿಕೋತ್ಸವದ ಅಂಗವಾಗಿ 2015–16ನೇ ಸಾಲಿನ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ ಹಾಗೂ ವಿವಿಧ ಕ್ರೀಡಾ ಸ್ಪರ್ಧೆಗಳನ್ನು ಜನವರಿ ಮತ್ತು ಫೆಬ್ರವರಿ ತಿಂಗಳಿನಲ್ಲಿ ಆಯೋಜಿಸಲು ನಿರ್ಧರಿಸಿದೆ.
ಸಂಘದ ಸದಸ್ಯರು ಮತ್ತು ಅವರ ಕುಟುಂಬದವರು ಈ ಸ್ಪರ್ಧೆಗಳಲ್ಲಿ ಭಾಗವಹಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ವಿನಂತಿ.
**(ಹೆಚ್ಚಿನ ಮಾಹಿತಿಗಾಗಿ ಪುಟ–15ನ್ನು ನೋಡಿ...)**

### ಅಭಿಮತ ರಸಪ್ರಶ್ನೆ

1. ಕುವೆಂಪು ಅವರ ಜನ್ಮದಿನ ಯಾವುದು? ಅವರಿಗೆ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಕೃತಿ ಯಾವುದು?
2. ಕನಕದಾಸರ ಮೂಲ ಹೆಸರು ಏನು? ಅವರ ಜಯಂತಿ ಎಂದು?
3. ಅಭಿಮತ ಬೆಳ್ಳಿ ಸಂಪುಟ ಬಿಡುಗಡೆ ಮಾಡಿದವರು ಯಾರು? ಮತ್ತು ಅವರು ಯಾವ ವೃತ್ತಿಯಲ್ಲಿದ್ದಾರೆ?
4. ಕರ್ನಾಟಕದ ಕಾವೇರಿ ನದಿ ಹುಟ್ಟಿದ ಸ್ಥಳ ಯಾವುದು?
5. ಅಭಿಮತ ಬೆಳ್ಳಿ ಸಂಪುಟ ಬಿಡುಗಡೆಯ ಸಂದರ್ಭದಲ್ಲಿ ಸಂಗೀತೋತ್ಸವ ಕಾರ್ಯಕ್ರಮವನ್ನು ನಡೆಸಿಕೊಟ್ಟ ತಂಡ ಯಾವುದು?

ಅಭಿಮತದ ಓದುಗರು ಈ ಮೇಲಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಅಂಚೆ ಮೂಲಕ ಅಥವಾ ಸಂಘದ ಇಮೇಲ್ : dksangha@gmail.com ಮೂಲಕ ದಿನಾಂಕ 25.12.2015ರ ಒಳಗಾಗಿ ತಲುಪಿಸತಕ್ಕದ್ದು. ಎಲ್ಲಾ ಸರಿಯಾದ ಉತ್ತರ ಕಳುಹಿಸಿದವರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಅಲ್ಲದೇ ಅವರನ್ನು ಯೋಗ್ಯವಾಗಿ ಪುರಸ್ಕರಿಸಲಾಗುವುದು. ರಸಪ್ರಶ್ನೆಯಲ್ಲಿ ಅಭಿಮತ ಸಂಪಾದಕ ಮಂಡಳಿಯವರು, ಅವರ ಮನೆಯವರು, ಸಂಘದ ಕಾರ್ಯಕಾರಿ ಸಮಿತಿಯವರು ಮತ್ತು ಅವರ ಮನೆಯವರು ಭಾಗವಹಿಸುವಂತಿಲ್ಲ.

ಡಿಸೆಂಬರ್ 2015ರ ಅಭಿಮತ ಪತ್ರಿಕೆಯಲ್ಲಿ ಪ್ರಕಟವಾದ ರಸಪ್ರಶ್ನೆಗಳಿಗೆ ಸರಿಯಾದ ಉತ್ತರ 1. ಶ್ರೀ ಕಂದಗಲ್ ಹಣಮಂತರಾಯರು. 2. ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ 'ಗ್ರಂಥ ಪಾಲಕರಾಗಿ' 3. 'ಪ್ರೊ. ಷ. ಶೆಟ್ಟರ್', ಅವರು ಖ್ಯಾತ 'ಇತಿಹಾಸಜ್ಞ ಮತ್ತು ಸಂಶೋಧಕರು' 4. 'ಉಭಯ ಭಾರತಿ' 5. 'ಶ್ರೀಗಂಧ ಮಹಿಳಾ ತಂಡ', ಗುರ್‌ಗಾಂವ್

ಸರಿಯಾದ ಉತ್ತರ ಕಳುಹಿಸಿದವರು.
1 ಶ್ರೀ ಡಿ. ಗೋವಿಂದ ರಾಜ, ಬಳ್ಳಾರಿ 2. ಶ್ರೀಮತಿ ಬಿ.ಎಂ. ಸೌಮ್ಯ 3. ಶ್ರೀಮತಿ ಪ್ರೇಮಲತಾ 4. ಶ್ರೀಮತಿ ಶಾರದಾ ಮಲ್ಲಣಗೌಡ ಎಸ್

### ವಿದ್ಯಾರ್ಥಿ ವೇತನ 2015–16

ದೆಹಲಿ ಕರ್ನಾಟಕ ಸಂಘದಿಂದ 2015–16ನೇ ಸಾಲಿಗಾಗಿ ನೀಡುವ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿಗಳನ್ನು ಕರೆಯಲಾಗಿದೆ.
ಸಂಘದ ಸದಸ್ಯರು ಅರ್ಜಿಯನ್ನು ಸಂಘದ ಕಾರ್ಯಾಲಯದಿಂದ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಯನ್ನು 31 ಜನವರಿ 2016ರೊಳಗಾಗಿ ಸಂಘದ ಕಾರ್ಯಾಲಯಕ್ಕೆ ತಲುಪಿಸಬೇಕು.
ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಅ

*ಪ್ರಧಾನ ಕಾರ್ಯದರ್ಶಿ*

ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 8860848585 – 011–26109615, 011–26104818



# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 26 ಸಂಚಿಕೆ 3
ಡಿಸೆಂಬರ್ 2015

**ಅಭಿಮತ ಪ್ರಧಾನ ಸಂಪಾದಕರು**

ಬಾಲಕೃಷ್ಣ ನಾಯ್ಕ್ ಡಿ.

**ಅಭಿಮತ ಸಂಪಾದಕ ಮಂಡಳಿ**

ಸಖಾರಾಮ ಉಪ್ಪೂರು
ಚಂದ್ರಶೇಖರ್ ಎನ್.ಪಿ.
ಎಸ್. ಕುಮಾರ್

**ಮುಖಪುಟ ಚಿತ್ರ**
ಆನಂದ ಈಶ್ವರಪ್ಪ ಮುರಗೋಡ

## ಸಂಪಾದಕೀಯ

# ಆಶಯಗಳು ಶುಭವಾಗಿರಲಿ

ಅಭಿಮತದ ಓದುಗರಿಗೆ ಹೊಸ ವರ್ಷದ ಹಾರ್ದಿಕ ಶುಭಾಶಯಗಳು. ಕಳೆದ ವರ್ಷದ ಏರುಪೇರುಗಳನ್ನು ಮೆಲುಕು ಹಾಕುವುದರ ಜತೆಗೆ ಮುಂದಿನ ದಿನಗಳ ಕುರಿತು ಆಲೋಚನೆಗಳು ಹುಟ್ಟುವುದೇ ಈ ಸಂದರ್ಭದಲ್ಲಿ. ಜಾಗತಿಕವಾಗಿ ಭೂಮಿಯ ಮೇಲೆ ಅಧಿಕ ಉಷ್ಣಾಂಶದ ಪರಿಣಾಮ ಎಲ್ಲೆಡೆ ಬೀರಿದೆ. ಹವಾಮಾನದ ಕಾಲಮಾನ ವ್ಯತ್ಯಸ್ಥವಾಗುತ್ತಿದೆ. ಜಾಗತಿಕ ಆರ್ಥಿಕ ವಲಯದಲ್ಲಿ ತೈಲಬೆಲೆಯ ಅತೀವ ಇಳಿಕೆಯಿಂದ ರಾಷ್ಟ್ರಗಳ ಅಭಿವೃದ್ಧಿ ಮೇಲೆ ಅತ್ಯಂತ ಪರಿಣಾಮಗಳು ಬೀರುತ್ತಿವೆ. ರಾಷ್ಟ್ರಗಳು ಆರ್ಥಿಕ ರಂಗದಲ್ಲಿ ಪೈಪೋಟಿ ನಡೆಸುತ್ತಿರುವಂತೆ ಭದ್ರತಾ ವ್ಯವಸ್ಥೆಗಳಲ್ಲೂ ಅತೀವ ವೆಚ್ಚವನ್ನು ಮಾಡುತ್ತಿವೆ. ಐಸಿಸ್ ಸಂಘಟನೆಯು ವಿಶ್ವದ ಬೃಹತ್ ರಾಷ್ಟ್ರಗಳ ಭದ್ರತಾ ವ್ಯವಸ್ಥೆಯ ಮೇಲೆ ತೀವ್ರವಾದ ಪರಿಣಾಮವನ್ನು ಮಾಡುವುದರೊಂದಿಗೆ ಸಾಮಾನ್ಯ ಪ್ರಜೆಗಳ ಬದುಕಿನ ಮೇಲೆಯೂ ಆತಂಕದ ಛಾಯೆಯನ್ನು ಹರಡಿದೆ. ಭಯೋತ್ಪಾದಕರನ್ನು ಹತ್ತಿಕ್ಕಲು ಬೃಹತ್ ರಾಷ್ಟ್ರಗಳು ತಮ್ಮ ಬಲವನ್ನು ಉಪಯೋಗಿಸಲು ಯೋಚಿಸಿವೆ. ಆದರೆ ಅಲ್ಲಿನ ಸಾಮಾನ್ಯ ಪ್ರಜೆಗಳು ಅದನ್ನು ಸಮರ್ಥಿಸುತ್ತಿಲ್ಲ. ಭಯೋತ್ಪಾದನೆಯಿಂದ ನಿರಾಶ್ರಿತರಾದವರಿಗೆ ರಾಜಕೀಯ ಪ್ರತಿಸ್ಪರ್ಧಿಗಳಿಂದಾಗಿ ಬೃಹತ್ ರಾಷ್ಟ್ರಗಳು ಆಶ್ರಯದಲ್ಲಿ ನೀಡದೇ ಇರಲು ಅಸಾಧ್ಯವಾಗಿದೆ, ಏಷ್ಯಾದ ರಾಷ್ಟ್ರಗಳು ಕೂಡಾ ಹೊಸ ಆಕಾಂಕ್ಷೆಗಳೊಂದಿಗೆ ಜಗತ್ತಿನ ಇತರ ರಾಷ್ಟ್ರಗಳೊಂದಿಗೆ ಪ್ರಮುಖ ಪಾತ್ರಗಳನ್ನು ವಹಿಸಲು ಪ್ರಯತ್ನಪಡುತ್ತಿವೆ.

ವರ್ಷಾರಂಭದಲ್ಲಿ ತಮ್ಮ ಮುಂದಿನ ವರ್ಷದ ಭವಿಷ್ಯವನ್ನು ಅರಿಯುವ ಕೆಲಸವನ್ನು ಎಲ್ಲರೂ ಮಾಡುತ್ತೇವೆ. ಗ್ರಹಗಳ ಚಲನೆಯ ಮೇಲೆ ಅವಲಂಬಿತವಾದ ಜ್ಯೋತಿಷ್ಯಶಾಸ್ತ್ರದ ಮೂಲಕ ಭವಿಷ್ಯವೆನ್ನು ಅರಿಯಲು ಕೆಲವರು ಹೊರಟರೆ, ತಮ್ಮ ಅನುಭವದ ಹಿಂದಿನ ವರ್ಷಗಳ ದೃಢ ನಿರ್ಧಾರಗಳ ಹೆಜ್ಜೆಗಳ ಮೇಲೆ ಅವಲಂಬಿತವಾದ ಭವಿಷ್ಯವನ್ನು ಅರಸಲು ಕೆಲವರು ಹೊರಡುತ್ತಾರೆ. ಕಳೆದ ವರ್ಷ ಕೈಗೊಂಡ ನಿರ್ಧಾರಗಳು ಮತ್ತು ಅವುಗಳ ಪರಿಣಾಮದಿಂದ ಈ ವರ್ಷದ ಘಟನೆಗಳು ಸಂಭವಿಸುತ್ತವೆ. ಕಳೆದ ವರ್ಷ ಬಿತ್ತಿದ ಬೀಜಗಳು ಈ ವರ್ಷ ಗಿಡವಾಗಬಹುದು. ಮುಂದಿನ ಉತ್ತಮ ಭವಿಷ್ಯಕ್ಕಾಗಿ ಇಂದಿನ ವರ್ಷ ಉತ್ತಮ ಕೆಲಸಗಳನ್ನು ಮಾಡಬೇಕು. ವರ್ಷಾರಂಭದಲ್ಲಿ ಹುಮ್ಮಸ್ಸಿನಿಂದ ತೆಗೆದುಕೊಳ್ಳುವ ನಿರ್ಣಯಗಳು ನಾವು ವಸ್ತುನಿಷ್ಠವಾಗಿ ಕಾರ್ಯಗತಗೊಳಿಸುವುದರ ಮೂಲಕ ಮಾತ್ರವೇ ವರ್ಷಾಂತ್ಯದಲ್ಲಿ ನಾವು ಎಣಿಸಿದ ಮಟ್ಟಕ್ಕೆ ತಲುಪಬಹುದು. ಹಾಗಾಗಿ ನಾವು ನಿರ್ಣಯಗಳನ್ನು ತೆಗೆದುಕೊಂಡರೆ ಸಾಲದು. ಅದಕ್ಕಾಗಿ ಕೆಲಸ ಮಾಡಲು ನಮ್ಮ ಶ್ರದ್ಧೆ, ಪ್ರಾಮಾಣಿಕತೆ, ಉತ್ಸುಕತೆ ಮತ್ತು ಹುರುಪು ಸದಾ ಇರಬೇಕು. ನಮ್ಮ ಸಾಮರ್ಥ್ಯದ ಬಗ್ಗೆ ಅನುಮಾನಗಳನ್ನು ತೊಡೆದು ಹಾಕಿ ಉನ್ನತ ಗುರಿಗಳನ್ನು ಇಟ್ಟು ಅದಕ್ಕಾಗಿ ಶ್ರಮಪಟ್ಟರೆ ನಾವು ಹೊಸ ವರ್ಷದಲ್ಲಿ ತೆಗೆದುಕೊಂಡ ನಿರ್ಣಯಗಳು ಯಶಸ್ವಿಯಾಗುತವೆ.

ಹೊಸ ವರ್ಷ ಆರಂಭವಾಗುತ್ತಿದ್ದಂತೆಯೇ ದೇಶದ ಭದ್ರತಾ ವ್ಯವಸ್ಥೆಗೆ ಸವಾಲೆಂಬಂತೆ ಭಾರತೀಯ ವಾಯುಪಡೆಯ ಮೇಲೆ ಬಹು ದೊಡ್ಡ ದಾಳಿಯಾಗಿದೆ. ರಕ್ಷಣಾ ಪಡೆಗಳು ತೆತ್ತ ಬೆಲೆ ಬಹು ದೊಡ್ಡದು. ಒಂದೆಡೆ ಸಂಬಂಧಗಳನ್ನು ಕೆಡಿಸುವ ವಿಚ್ಛಿದ್ರಕಾರಿ ಕೃತ್ಯಗಳು ನಡೆಯುತ್ತಿವೆ. ದೇಶದ ಅಭಿವೃದ್ಧಿಯ ಪಥದಲ್ಲಿ ಕೊಡುಗೆ ನೀಡುವ ಪ್ರಜೆಗಳ ಜತೆಗೆ ರಾಷ್ಟ್ರ ರಕ್ಷಣೆಯಲ್ಲಿ ತೊಡಗಿರುವವರ ಕುರಿತೂ ನಾವು ಯೋಚಿಸಬೇಕು. ಕರ್ನಾಟಕ ಸೇರಿದಂತೆ ದೇಶದ ವಿವಿಧ ಮೂಲೆಗಳಿಂದ ಯುವಕರು ದೇಶ ರಕ್ಷಣೆಯ ಕೈಂಕರ್ಯಕ್ಕೆ ಸೇರುತ್ತಾರೆ. ಅವರ ಹುಮ್ಮಸ್ಸು ಹಿಮ್ಮೆಟ್ಟದಂತಹ ಕೆಲಸಗಳಾಗಬೇಕು. ದೆಹಲಿ ಸೇರಿದಂತೆ ಉತ್ತರ ಭಾರತದಲ್ಲಿ ಹಾಗೂ ದೇಶದ ಗಡಿಗಳಲ್ಲಿ ಅನೇಕ ಕನ್ನಡಿಗರು ತಮ್ಮ ತಾಯ್ನಾಡನ್ನು ಬಿಟ್ಟು ದೇಶದ ರಕ್ಷಣೆಯ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಹೊಸ ವರ್ಷದಲ್ಲಿ ಆದ ಆಘಾತಕಾರಿ ಘಟನೆ ಮತ್ತೆ ಮರುಕಳಿಸದೇ, ವೈರಿಗಳ ಗುಂಡುಗಳಿಗೆ ಎದೆಯೊಡ್ಡಿ ನಮ್ಮನ್ನು ರಕ್ಷಿಸುವ ಅವರೆಲ್ಲರೂ ಸುರಕ್ಷಿತರಾಗಿರಲಿ ಎಂದು 2016ರ ಈ ಆರಂಭದ ದಿನಗಳಲ್ಲಿ ಹಾರೈಸೋಣ. ಮತ್ತೊಮ್ಮೆ ಎಲ್ಲರಿಗೂ ಹೊಸ ವರ್ಷದ ಶುಭಾಶಯಗಳು. ಅ

ಬಾಲಕೃಷ್ಣ ನಾಯ್ಕ್ ಡಿ.



# ಅಭಿಮತ ಬರವಣಿಗೆ ಕಾರ್ಯಗಾರ







ದೆಹಲಿ ಕರ್ನಾಟಕ ಸಂಘದ ವಿಚಾರ ಸಂಕಿರಣ ಭವನದಲ್ಲಿ ಡಿಸೆಂಬರ್ 6, 2015ರಂದು "ಅಭಿಮತ ಬರವಣಿಗೆ ಕಾರ್ಯಗಾರ"ವನ್ನು ಏರ್ಪಡಿಸಲಾಗಿತ್ತು. ಕಾರ್ಯಗಾರವನ್ನು ಉದ್ಘಾಟಿಸಿದ ಉದಯವಾಣಿ ಪತ್ರಿಕೆಯ ದೆಹಲಿಯ ವರದಿಗಾರರಾದ ರಾಕೇಶ್ ಎನ್.ಎಸ್. ಅವರು 'ಪತ್ರಿಕೋದ್ಯಮದ ಮೂಲ ಪಾಠಗಳು' ಕುರಿತಾಗಿ ಮಾತನಾಡುತ್ತಾ ಪತ್ರಕರ್ತರನ್ನು ಜನರು ಸದಾ ವಿಶೇಷ ಮತ್ತು ಪ್ರಭಾವಶಾಲಿ ವ್ಯಕ್ತಿಗಳನ್ನಾಗಿ ಕಾಣುತ್ತಾರೆ. ಹಾಗಾಗಿ ನಾವು ಬರೆಯುವ ಯಾವುದೇ ಒಂದು ಬರಹ ಅಥವಾ ವರದಿ ಓದುಗರಿಗೆ ಆಸಕ್ತಿ ಮೂಡಿಸುವಂತಿರಬೇಕು. ಬರವಣಿಗೆಯ ಮುಖ್ಯ ಉದ್ದೇಶ ಆಕರ್ಷಕ ಸುದ್ದಿಯ ಜೊತೆಗೆ ಮಾಹಿತಿ ಹಾಗೂ ಜ್ಞಾನವನ್ನು ಒದಗಿಸುವುದು. ಬರವಣಿಗೆಯಲ್ಲಿ ಬರಹಗಾರ ತನ್ನೆಲ್ಲಾ ವೈಯಕ್ತಿಕ ಪೂರ್ವಾಗ್ರಹಗಳನ್ನು ಬದಿಗಿಟ್ಟು ಸರಳ ಸುಂದರ ಭಾಷೆಯಲ್ಲಿ ಓದುಗರನ್ನೇ ಗಮನದಲ್ಲಿಟ್ಟುಕೊಂಡು ಬಹಳ ಸತ್ಯನಿಷ್ಠವಾದ ವರದಿಯನ್ನು ಮಾಡುವುದು ಅತ್ಯಗತ್ಯ. ಪ್ರತೀ ಬರವಣಿಗೆಯಲ್ಲಿ ತಲೆಬರಹ, ದಿನಾಂಕ ಮತ್ತು ಸ್ಥಳ, ಪರಿಚಯ 5W1H– who-ಯಾರು, what–ಏನು, why-ಏಕೆ, when-ಯಾವಾಗ, where-ಎಲ್ಲಿ, how-ಹೇಗೆ ಮತ್ತು ವಿವರಣೆ ಇವು ತಪ್ಪದೇ ಗಮನದಲ್ಲಿಡಬೇಕಾದ ವಿಷಯಗಳು. ವರದಿಗಾರರು ಹಾಗು ಸಂಪಾದಕರ ನಡುವಿನ ಸಂಬಂಧದ ಕುರಿತು ಸಹ ಬಹಳ ಮಾರ್ಮಿಕವಾಗಿ ವಿವರಿಸಿದರು. ಅಭಿಮತ ತನ್ನದೇ ಆದ ಒಂದು ಸ್ಟೈಲ್‌ಶೀಟನ್ನು ಕೂಡಾ ಬೆಳೆಸಿಕೊಳ್ಳಬೇಕು ಎಂದು ರಾಕೇಶ್ ಅವರು ಅಭಿಪ್ರಾಯಪಟ್ಟರು.

ಇನ್ನೊಬ್ಬ ವಾಗ್ಮಿ ಹಾಗು ಸಂಪನ್ಮೂಲ ವ್ಯಕ್ತಿಯಾಗಿ ನಮ್ಮ ದೆಹಲಿಯಲ್ಲಿ ಕರ್ನಾಟಕ ಸರ್ಕಾರದ ಮಾಹಿತಿ ಇಲಾಖೆಯ, ಉಪ ನಿರ್ದೇಶಕರಾಗಿರುವ ಶ್ರೀ ಶ್ರೀನಿವಾಸ್ ಹೆಚ್ ಅವರು 'ಸಂಘ ಸಂಸ್ಥೆಗಳಲ್ಲಿ ಸುದ್ದಿ ಸಂಗ್ರಹ'ದ ಬಗ್ಗೆ ಮಾತನಾಡುತ್ತಾ ಪತ್ರಿಕೆಯ ನೋಂದಣಿಯಿಂದ ಹಿಡಿದು ಅದರ ಮಹತ್ವ ಹಾಗು ಕಾನೂನಿನ ನಿಯಮಗಳನ್ನು ಬಹಳ ಅಚ್ಚುಕಟ್ಟಾಗಿ ವಿವರಿಸಿದರು. ಬರವಣಿಗೆಯನ್ನು ಹೇಗೆ ಬರೆಯಬೇಕೆಂಬ ವಿಷಯದ ಮೇಲೂ ಅವರು ಬೆಳಕು ಚೆಲ್ಲಿದರು.

ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಸದಸ್ಯರುಗಳು ಮುಕ್ತವಾಗಿ ಪ್ರಶ್ನೆಗಳನ್ನು ಕೇಳುತ್ತಾ ಇರ್ವರೂ ಸಂಪನ್ಮೂಲ ವ್ಯಕ್ತಿಗಳಿಂದ ತಮ್ಮ ಮನಸ್ಸಿನಲ್ಲಿದ್ದ ಬರವಣಿಗೆಯ ಕುರಿತಾದ ಹಲವಾರು ಗೊಂದಲಗಳಿಗೆ ಸೂಕ್ತ ಪರಿಹಾರ ಕಂಡುಕೊಂಡರು.

'ಅಭಿಮತದ' ಮುಖ್ಯ ಸಂಪದಕರಾದ ಬಾಲಕೃಷ್ಣ ನಾಯ್ಕ್ ಅವರು 'ಆಂತರಿಕ ಸಂವಹನ ಮತ್ತು ಬರವಣಿಗೆ' ಎಂಬ ವಿಷಯ ಮಂಡಿಸುತ್ತಾ ಸಂಘದ ಸದಸ್ಯರಿಂದ ಅಭಿಮತಕ್ಕಾಗಿ ಬರುತ್ತಿರುವ ಬರವಣಿಗೆಗಳಲ್ಲಿ ಕಂಡು ಬರುವ ಸಮಸ್ಯೆಗಳನ್ನು ಸಂಪಾದಕರಾಗಿ ಅವರು ಹೇಗೆ ತಿದ್ದುಪಡಿ ಮಾಡಿಕೊಂಡು ಪ್ರಕಟಿಸಲು ಶ್ರಮವಹಿಸಬೇಕಾಗುತ್ತದೆ ಎಂದು ಕೆಲವು ಉದಾಹರಣೆಗಳ ಸಹಿತವಾಗಿ ವಿವರಿಸಿದರು.

ಕಾರ್ಯಗಾರದಲ್ಲಿ ಸಂಘದ ಅಧ್ಯಕ್ಷರಾದ ವಸಂತ ಶೆಟ್ಟಿ ಬೆಳ್ಳಾರೆ ಹಾಗು ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಹಾಗು ಇನ್ನಿತರ ಸದಸ್ಯರು ಸಹ ಭಾಗವಹಿಸಿದ್ದರು. ಈ ರೀತಿಯ ಕಾರ್ಯಾಗಾರಗಳ ಅವಶ್ಯಕತೆ ಇದ್ದು ಸಂಘದ ಸದಸ್ಯರು ಇಂತಹ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸದುಪಯೋಗ ಪಡೆದುಕೊಳ್ಳಬೇಕು.

ಕಾರ್ಯಕಾರಿ ಸಮಿತಿಯ ಸದಸ್ಯರಾದ ಸಖಾರಾಮ ಉಪ್ಪೂರು ಅವರು ಕಾರ್ಯಾಗಾರದ ಉದ್ದೇಶ ತಿಳಿಸುತ್ತಾ ಬಂದವರನ್ನು ಸ್ವಾಗತಿಸಿದರು. ಬಾಲಕೃಷ್ಣ ನಾಯ್ಕ್ ಅವರು ವಂದನಾರ್ಪಣೆ ಸಲ್ಲಿಸಿದರು. ಅ

*ಭಂಡಾರ್‌ಕರ್ ಎಸ್. ಎಲ್*

# ಅಭಿಮತ

## ಪತ್ರಿಕೆ ದೆಹಲಿ ಕನ್ನಡಿಗರ ಸೃಜನಶೀಲತೆಯ ಅಭಿವ್ಯಕ್ತಿಗೆ ವೇದಿಕೆಯಾಗಲಿ

– ಹೆಚ್.ಎಸ್. ಶಿವಪ್ರಕಾಶ್




ದೆಹಲಿಯಲ್ಲಿ ಕನ್ನಡ ಪತ್ರಿಕೆಯೊಂದು 25 ವರ್ಷ ಎಡೆಬಿಡದೇ ಪ್ರಕಟವಾಗುತ್ತಾ ರಜತ ಮಹೋತ್ಸವವನ್ನು ಆಚರಿಸುತ್ತಿರುವುದು ಬಹಳ ಸಂತೋಷದ ವಿಷಯ. ಮುಂದೆ ಇದರ ಸುವರ್ಣ ಮಹೋತ್ಸವ, ವಜ್ರ ಮಹೋತ್ಸವ ಆಗಿ ಪತ್ರಿಕೆ ನಿರಂತರವಾಗಿರಲಿ. ಆಚಂದ್ರಾರ್ಕವಾಗಿ ಪತ್ರಿಕೆ ನಡೆಯುತ್ತಿರಲಿ ಎಂದು **ಪ್ರೊ. ಶಿವಪ್ರಕಾಶ್** ಅವರು ಹಾರೈಸಿದರು.

ದೆಹಲಿ ಕರ್ನಾಟಕ ಸಂಘದ ಮುಖಪತ್ರಿಕೆ ಅಭಿಮತವು ದೆಹಲಿ ಕನ್ನಡಿಗರ ಸೃಜನಶೀಲತೆಯ ಅಭಿವ್ಯಕ್ತಿಗೆ ವೇದಿಕೆ ಸೃಷ್ಟಿಸಿಕೊಡುವ ಕೆಲಸವನ್ನು ಮಾಡಬೇಕೆಂದು ಪ್ರಖ್ಯಾತ ಬರಹಗಾರ, ಕವಿ, ಪ್ರೊ. ಹೆಚ್. ಎಸ್. ಶಿವಪ್ರಕಾಶ್ ಅವರು ಅಭಿಪ್ರಾಯಪಟ್ಟರು. ಇದೇ ಡಿಸೆಂಬರ್ 6 ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಏರ್ಪಡಿಸಿದ್ದ ಸಂಘದ ಮುಖಪತ್ರಿಕೆ ಅಭಿಮತದ ಬೆಳ್ಳಿ ಸಂಪುಟದ ವಿಶೇಷ ಸಂಚಿಕೆಯನ್ನು ಬಿಡುಗಡೆಗೊಳಿಸಿ ಮಾತನಾಡುತ್ತಿದ್ದರು.

ದೆಹಲಿಯಲ್ಲಿರುವ ಕನ್ನಡಿಗರ ಸೃಜನಶೀಲ ಅಭಿವ್ಯಕ್ತಿಗೆ ಒಂದು ವೇದಿಕೆಯನ್ನು ಒದಗಿಸುವಂತೆ ಅಭಿಮತದ ಒಂದು ಅರೆವಾರ್ಷಿಕ ಅಥವಾ ವಾರ್ಷಿಕ ಸಂಚಿಕೆಯನ್ನು ತರಬೇಕು. ಅದು ದೆಹಲಿಯಲ್ಲಿರುವ ಹಿರಿಯ ಮತ್ತು ಕಿರಿಯ ಕನ್ನಡಿಗರ ಸಾಹಿತ್ಯಾಭಿವ್ಯಕ್ತಿಗೆ, ಬರವಣಿಗೆಗೆ, ಅವರ ವಿಚಾರಗಳಿಗೆ ಮತ್ತು ಅವರ ಸ್ವಯಮಾಭಿವ್ಯಕ್ತಿಗೆ ಒಂದು ವೇದಿಕೆಯಾಗಬೇಕು ಎಂದು ಅವರು ನುಡಿದರು.

ಕನ್ನಡ ಜನತೆ ದೆಹಲಿಯಲ್ಲಿ ತಮಿಳು, ತೆಲುಗು ಮತ್ತು ಬಂಗಾಳಿಗಳಂತೆ ಬಹುಸಂಖ್ಯಾತರಲ್ಲ. ಆ ಸಂಖ್ಯಾಬಲದಲ್ಲಿ ನಾವಿನ್ನೂ ಅವರ ಜತೆ ಸ್ಪರ್ಧಿಸಲಾಗದಿದ್ದರೂ ಸಹಾ ನಮ್ಮ ಇರುವಿಕೆಯ ಗುಣಮಟ್ಟದಲ್ಲಿ ನಾವು ಅವರ ಜತೆ ಸ್ಪರ್ಧಿಸಬಹುದು. ಆದ್ದರಿಂದ ಈ ಪತ್ರಿಕೆಯನ್ನು ಇನ್ನೂ ಹೆಚ್ಚು ಉತ್ತಮಗೊಳಿಸುವ ಹೊಸ ಹೊಸ ಯೋಜನೆಗಳು ಇಂದಿನ ಮತ್ತು ಮುಂದಿನ ಸಂಪಾದಕರಿಗೆ ಬರುತ್ತದೆ ಎಂದು ಹಾರೈಸಿದರು. ದೆಹಲಿಯಲ್ಲಿ ಕನ್ನಡ ಪತ್ರಿಕೆಯೊಂದು 25 ವರ್ಷ ಎಡೆಬಿಡದೇ ಪ್ರಕಟವಾಗುತ್ತಾ ರಜತ ಮಹೋತ್ಸವವನ್ನು ಆಚರಿಸುತ್ತಿರುವುದು ಬಹಳ ಸಂತೋಷದ ವಿಷಯ. ಮುಂದೆ ಇದರ ಸುವರ್ಣ ಮಹೋತ್ಸವ, ವಜ್ರ ಮಹೋತ್ಸವ ಆಗಿ ಪತ್ರಿಕೆ ನಿರಂತರವಾಗಿರಲಿ. ಆಚಂದ್ರಾರ್ಕವಾಗಿ ಪತ್ರಿಕೆ ನಡೆಯುತ್ತಿರಲಿ ಎಂದು ಪ್ರೊ. ಶಿವಪ್ರಕಾಶ್ ಅವರು ಹಾರೈಸಿದರು. "ದೆಹಲಿಗೆ ಬಂದಾಗಿನಿಂದ ಅಭಿಮತದ ಸಂಚಿಕೆಗಳನ್ನು ನೋಡುತ್ತಿದ್ದೇನೆ. ಅದರ ಗುಣಮಟ್ಟದಲ್ಲಿ ಸುಧಾರಣೆಗಳನ್ನು ಸಂತೋಷದಿಂದ ನೋಡುತ್ತಿದ್ದೇನೆ. ಅನೇಕ ಮಂದಿ ಸಂಪಾದಕರು ಇದಕ್ಕೆ ಶ್ರಮ ಪಟ್ಟಿದ್ದಾರೆ. ಯಾರೆಲ್ಲ ಇದರ ನಿರಂತರತೆಗಾಗಿ ಕಾಣಿಕೆಯನ್ನು ಕೊಟ್ಟಿದ್ದಾರೆ ಅವರಿಗೆಲ್ಲಾ ನನ್ನ ಅಭಿನಂದನೆಗಳು" ಎಂದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಜವಾಹರಲಾಲ್ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾದ ಡಾ. ಪುರುಷೋತ್ತಮ ಬಿಳಿಮಲೆಯವರು ಮಾತಾಡುತ್ತ ಈಗ ಒಂದು ಸುಸ್ಥಿರ ಮತ್ತು ಸುಂದರ ನೆಲೆಯನ್ನು ಕಂಡುಕೊಂಡಿರುವ ಸಂಘದ ಮುಖಪತ್ರಿಕೆ ಅಭಿಮತವು ಮುಂದಿನ ದಿನಗಳಲ್ಲಿ ಸಾಮಾಜಿಕ ಆಯಾಮಗಳತ್ತ ಕಣ್ಣುಹಾಯಿಸುವ ಮೂಲಕ ದೇಶದಲ್ಲಿನ ಆಗು–ಹೋಗುಗಳಿಗೆ ಸ್ಪಂದಿಸುವಂತಾಗಬೇಕು ಎಂದರು. ದೇಶದಲ್ಲಿ ದೊಡ್ಡ ಬಿಕ್ಕಟ್ಟುಗಳು ಬಂದಾಗ ಸಹಾಯ ಮಾಡುವುದು, ಮುಕ್ತವಾದ ಚರ್ಚೆಯನ್ನು ಮಾಡುವುದು ಆಗಬೇಕು. ಒಂದು ಸಾಮಾಜಿಕ ಆಯಾಮವನ್ನು ಬೆಳೆಸಿಕೊಂಡರೆ ಪತ್ರಿಕೆಯು ಒಂದು ಲಕ್ಸುರಿಯಾಗದೇ ಉಳಿಯುವ ಸಾಧ್ಯತೆ ಇದೆ ಎಂದು ಅವರು ನುಡಿದರು. ಬೆಳ್ಳಿ ಸಂಪುಟದ ವಿಶೇಷ ಸಂಚಿಕೆಯು ಚೆನ್ನಾಗಿ ಬಂದಿದೆ. ಅದರಲ್ಲಿ ಮುಖ್ಯವಾದ ಬರಹಗಳಿವೆ. ಅದನ್ನು ಎಲ್ಲರೂ ಓದಬೇಕು ಎಂದು ಅವರು ಸಲಹೆ ನೀಡಿದರು.

ಮತ್ತೊಬ್ಬ ಅತಿಥಿ ವಿಜಯಕರ್ನಾಟಕ ಪತ್ರಿಕೆಯ ದೆಹಲಿ ವರದಿಗಾರರಾದ ಶ್ರೀ ಡಿ. ಉಮಾಪತಿ ಅವರು ಮಾತನಾಡಿ ನಮ್ಮ ಆಚೆಗೂ ಕೂಡಾ ನಾವು ಆಲೋಚನೆ ಮಾಡಬೇಕು. ಮೂವತ್ತು–ನಲ್ವತ್ತು ವರ್ಷಗಳ ಹಿಂದೆ ದಿಲ್ಲಿಗೆ ಬಂದು ನೆಲೆಸಿರುವ ಕನ್ನಡಿಗರು ತ್ರಿಲೋಕ್‌ಪುರಿ, ಇಂದಿರಾನಗರ,

ಕರೋಲ್‌ಬಾಗ್, ಮಂಗೋಲ್‌ಪುರಿ ಇಂಥ ಕಡೆ ಇಂದಿಗೂ ಇದ್ದಾರೆ ಅಂಥವರ ಕುರಿತೂ ಲೇಖನಗಳು ಅಭಿಮತದಲ್ಲಿ ಬರಬೇಕು ಎಂದರು. ಸಾಂಸ್ಕೃತಿಕವಾಗಿ ನಮಗೆ ವ್ಯತ್ಯಾಸ ಇರಬಹುದು. ಆದರೆ ಅವರೂ ಕನ್ನಡಿಗರು. ಅವರು ತಮಿಳುನಾಡಿನಿಂದ ಬಂದವರು. ಅವರ ಮನೆಮಾತು ಕನ್ನಡ. ಆರ್ಥಿಕವಾಗಿ ಬಹಳ ಕೆಳಗಡೆ ಇರುವವರು. ಕೊಳಗೇರಿಗಳಲ್ಲಿ ವಾಸವಾಗಿರುವವರು. ನಮಗೂ ಅವರಿಗೂ ಅಂತರವಿದೆ. ಅವರನ್ನು ಮಾತಾಡಿಸುವುದು, ಕರೆಯುವುದು ಮಾಡಬೇಕು. ಸಂಘದ ಸದಸ್ಯರನ್ನಾಗಿ ಮಾಡದಿದ್ದರೂ. ಅವರು ಕನ್ನಡವನ್ನೇ ಮಾತಾಡುತ್ತಿದ್ದಾರೆ. ತಮಿಳುನಾಡಿನಲ್ಲೂ ಕನ್ನಡದ ಹಣತೆಯನ್ನು ಹಚ್ಚಿಟ್ಟು ಬಂದವರು. ಅಭಿಮತದಲ್ಲಿ ಅವರ ಕುರಿತು ಲೇಖನವನ್ನು ಬರೆಯಬೇಕು ಎಂದರು.

ಅಭಿಮತದ ವೈಶಿಷ್ಟ್ಯ ಏನು ಅಂದರೆ ಅದು ನಿಂತ ನೀರು ಆಗಲಿಲ್ಲ. ಕಾಲ ಧರ್ಮಕ್ಕೆ ತಕ್ಕಂತೆ ಅದು ಹೆಜ್ಜೆ ಹಾಕಿತು. ಯಾವುದೇ ಒಂದು ಕಾಲಮಾನದಲ್ಲಿ ಬಂಧಿಯಾಗಲಿಲ್ಲ. ಅದು ಅದರ ದೊಡ್ಡ ಹೆಗ್ಗಳಿಕೆ ಎಂದು ಶ್ರೀ ಉಮಾಪತಿ ಅಭಿಪ್ರಾಯ ಪಟ್ಟರು. 'ಪತ್ರಕರ್ತನಾಗಿ ನಾನು ನೋಡುವಂತಹ ನಿಯತಕಾಲಿಕಗಳು ಹಲವು. ಅವುಗಳೆಲ್ಲದರಲ್ಲಿಯೂ ರೂಪ, ಬಣ್ಣ ಮತ್ತು ವಿನ್ಯಾಸಗಳಲ್ಲಿ ಕನ್ನಡದ ಬಹುಪಾಲು ವೃತ್ತಿಪರ ನಿಯತಕಾಲಿಕಗಳಿಗೆ ಸರಿಸಮಾನವಾಗಿ ನಿಲ್ಲುವಂತಹ ಪತ್ರಿಕೆಯಿದು ಎಂದರೆ ಉತ್ಪ್ರೇಕ್ಷೆಯೆನಿಸುವುದಿಲ್ಲ' ಎಂದರು.

"ನಾನು ಅಭಿಮತದ ಹಲವಾರು ಸಂಚಿಕೆಗಳನ್ನು 1996ರಿಂದಲೇ ಗಮನಿಸುತ್ತಿದ್ದೇನೆ. ಸಂಘದ ರಾಜಕೀಯದಲ್ಲಿ ಕೂಡಾ ಸೂಕ್ಷ್ಮವಾಗಿ ಅಭಿಮತದ ಬಳಕೆಯಾಗಿದೆ. ಅದು ಅನಿವಾರ್ಯ ಅಂತ ಕಾಣುತ್ತದೆ. ಅದು ಅದರ ಹಿನ್ನಡೆ ಕೂಡಾ. ರಾಗದ್ವೇಷಗಳು ಈ ನಿಯತಕಾಲಿಕದ ಪುಟಗಳಲ್ಲಿ ಕಾರಿಕೊಂಡಿರುವುದನ್ನು ನೋಡಿದ್ದೇನೆ. ಆದರೆ ಬಹಳಷ್ಟು ಸಂಗ್ರಹಯೋಗ್ಯ ಸಂಚಿಕೆಗಳೇ ಬಂದಿವೆ. ವ್ಯಕ್ತಿಗಳ ಬಗ್ಗೆ, ಕವಿಗಳ ಬಗ್ಗೆ, ಕಲಾವಿದರ ಬಗ್ಗೆ ನಾವು ಪತ್ರಕರ್ತರು ಅದನ್ನು ತೆಗೆದಿಟ್ಟುಕೊಳ್ಳುವಷ್ಟು ಅದ್ಭುತವಾದ ಸಂಚಿಕೆಗಳು ಬಂದಿವೆ. ಸಂಭಾವನೆ, ಪ್ರತಿಫಲಾಪೇಕ್ಷೆಯಿಲ್ಲದೇ ಒಂದು ತಂಡ ಕರ್ನಾಟಕದಿಂದ ಬಹಳ ದೂರದ ದೆಹಲಿಯ ಕನ್ನಡೇತರ ವಾತಾವರಣದಲ್ಲಿ ಇಂತಹ ಮುದ್ದಾದ ಪತ್ರಿಕೆಯನ್ನು ಹೊರತರುವುದು ಬಹಳ ದೊಡ್ಡ ಸಾಧನೆ. ಇದನ್ನು ಲಘುವಾಗಿ ಪರಿಗಣಿಸುವ ತರ ಇಲ್ಲ. ಈ ಅಭಿಮತದ ಹುಟ್ಟು, ಅಂಬೆಗಾಲಿಡುತ್ತಿದ್ದ ದಿನಗಳನ್ನು ಬೆಳ್ಳಿ ಸಂಚಿಕೆಯಲ್ಲಿ ಬಹಳಷ್ಟು ಜನರು ಬರೆದಿದ್ದಾರೆ. ಅದನ್ನು ಆಗ್ರಹ, ಸಿಟ್ಟು, ಸೆಡವು ಇದೆಲ್ಲರ ಜತೆಗೆ ಕಟ್ಟಿಕೊಟ್ಟಿದ್ದಾರೆ" ಎಂದರು.

ಅಭಿಮತಕ್ಕೆ ಎಷ್ಟೋ ಮಂದಿ ಎಲೆಮರೆಯ ಕಾಯಿಯ ತರಹ ದುಡಿದು ಭದ್ರ ತಳಪಾಯವನ್ನು ಹಾಕಿದ್ದಾರೆ. ಹಸ್ತಪ್ರತಿಯನ್ನು ಕರೋಲ್‌ಭಾಗ್‌ನ ಕನ್ನಡದ ಗಂಧ ಗಾಳಿಯಿಲ್ಲದ ಮುದ್ರಣಾಲಯದಲ್ಲಿ ಅಚ್ಚು ಮಾಡಿಕೊಂಡು ಪ್ರಕಟಿಸುತ್ತಿದ್ದ ಆ ದಿನಗಳನ್ನು, ಅಂದಿನ ಹಿರಿಯರ ನಿಸ್ವಾರ್ಥ ಶ್ರಮ ಮತ್ತು ಸಮಯವನ್ನು ನೆನೆಯಲೇಬೇಕು. ಅಭಿಮತದ ಹುಟ್ಟು ಬೆಳವಣಿಗೆ ಕುರಿತು ಅನೇಕ ಮಂದಿ ಹಿರಿಯರು ಈ ವಿಶೇಷ ಸಂಚಿಕೆಯಲ್ಲಿ ಲೇಖನಗಳನ್ನು ಬರೆದಿದ್ದಾರೆ. ರಸಭರಿತ ಲೇಖನಗಳು ಈ ಬೆಳ್ಳಿ ಸಂಚಿಕೆಯಲ್ಲಿದ್ದಾವೆ. ಅವುಗಳನ್ನು ಓದಿದರೆ ಈ ಸಂಚಿಕೆಯನ್ನು ಪ್ರಕಟಿಸಿರುವುದು ಸಾರ್ಥಕವಾಗಿರುತ್ತದೆ ಎಂದು ಶ್ರೀ ಉಮಾಪತಿ ಅವರು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಮಾತನಾಡಿ ಅಭಿಮತ ಪತ್ರಿಕೆಯ ಆರಂಭದಿಂದ ಇಂದಿನವರೆಗೂ ಅದರ ಜೊತೆ ಅವಿನಾಭಾವ ಸಂಬಂಧ ಹೊಂದಿರುವುದಾಗಿ ಹೇಳುತ್ತಾ ಏನೆಲ್ಲ ಭಿನ್ನ ಮತ ಗಳಿದ್ದರೂ ಅಭಿಮತ ಎಲ್ಲರ ಸಹಮತದಿಂದ ಇಷ್ಟು ಚೆನ್ನಾಗಿ ಬೆಳೆದು ನಿಂತಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು. ಅಭಿಮತದ ಮೂಲಕ ದೆಹಲಿಯ ಅನೇಕರು ಕನ್ನಡದ ಬರಹಗಾರರಾಗಿ ಬೆಳೆಯಲು ಅವಕಾಶ ಮಾಡಿ ಕೊಟ್ಟಿದೆ ಎಂದರು.

ಬೆಳ್ಳಿ ಸಂಪುಟ ಹೊರಬರಲು ಶ್ರಮಿಸಿದ್ದ ಅಭಿಮತ ಪತ್ರಿಕೆಯ ಸಂಪಾದಕರಾದ ಶ್ರೀ ಬಾಲಕೃಷ್ಣ ನಾಯ್ಕ್ ಡಿ ಅವರು ಈ ವಿಶೇಷ ಸಂಚಿಕೆ ಹೊರಬರಲು ಸಹಕರಿಸಿದ ಸಂಪಾದಕ ಮಂಡಳಿಯ ಎಲ್ಲ ಸದಸ್ಯರಿಗೂ ಹಾಗೂ ವಿಶೇಷ ಸಂಚಿಕೆಗೆ ಶ್ರಮಿಸಿದ ಎಲ್ಲರಿಗೂ ಕೃತಜ್ಞತೆಗಳನ್ನು ಅರ್ಪಿಸಿದರು. ಅಭಿಮತದ ಮುಂದಿರುವ ಹೊಸ ಸವಾಲುಗಳ ಕುರಿತೂ ಅವರು ತಮ್ಮ ವಿಚಾರಗಳನ್ನು ತಿಳಿಸಿದರು.

ನಂತರ ಅಭಿಮತ ಪತ್ರಿಕೆ ಸಂಪಾದಕ ಮಂಡಳಿಯಲ್ಲಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದು ಇಂದಿನ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಸದಸ್ಯರೆಲ್ಲರಿಗೂ ಹೂಗುಚ್ಛ ನೀಡಿ ಗೌರವಿಸಲಾಯಿತು. ಸಂಘದ ಪ್ರಧಾನ ಕಾರ್ಯದರ್ಶಿ ಸಿ. ಎಂ. ನಾಗರಾಜ ಅವರು ಎಲ್ಲರನ್ನೂ ಸ್ವಾಗತ ಮಾಡಿದರು. ಜಂಟಿ ಕಾರ್ಯದರ್ಶಿ ಶ್ರೀಮತಿ ಜಮುನಾ ಮಠದ ಅವರು ವಂದನಾರ್ಪಣೆ ಮಾಡಿದರು. ಸಂಘದ ಉಪಾಧ್ಯಕ್ಷರಾದ ಶ್ರೀಮತಿ ಆಶಾಲತ ಎಂ. ಅವರು ಕಾರ್ಯಕ್ರಮದ ನಿರೂಪಣೆ ಮಾಡಿದರು.

ಸಭಾ ಕಾರ್ಯಕ್ರಮ ಮುಗಿದ ನಂತರ ಬೆಂಗಳೂರಿನ ಸ್ವರಾಮೃತ ತಂಡದಿಂದ ಕಲಾತ್ಮಕ ಗೀತೆಗಳ ಸಂಗೀತೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸಭಿಕರೆಲ್ಲರೂ ಸಂಗೀತೋತ್ಸವವನ್ನು ಆಸ್ವಾದಿಸಿದರು. ಅ

*ಚಂದ್ರಶೇಖರ್ ಎಸ್.ಪಿ.*









# ದೆಹಲಿಯಲ್ಲಿ ಅರೆಭಾಷೆ ಅಕಾಡೆಮಿಯಿಂದ ಸಾಂಸ್ಕೃತಿಕ ಸಂಗಮ

**ಒಳ್ಳೆಯ ಸಾಹಿತ್ಯ ಅರೆಭಾಷೆಗೆ ಭಾಷಾಂತರವಾಗಬೇಕು–ಡಾ. ಬಿಳಿಮಲೆ**

ಯಾವುದೇ ಒಂದು ಭಾಷೆ ತನ್ನ ಜಾತಿ, ಜನಾಂಗ ಅಥವಾ ಪ್ರಾದೇಶಿಕತೆಯ ಆಧಾರದ ಮೇಲೆ ಹುಟ್ಟಿಕೊಂಡು ಬೆಳೆಯುತ್ತಾ ಬಂದು ಅಲ್ಲಿನ ಎಲ್ಲಾ ಜನರ ಮೇಲೆ ತನ್ನ ಪ್ರಭಾವವನ್ನು ಬೀರಿದಾಗ ಆ ಭಾಷೆ ಜಾತಿ ಹಾಗೂ ಸಮುದಾಯವನ್ನು ಮೀರಿ ಆ ಇಡೀ ಪ್ರಾಂತ್ಯದ ಸಂಸ್ಕೃತಿ ಮತ್ತು ಸಾಹಿತ್ಯದ ಬೆಳವಣಿಗೆಗೆ ಕಾರಣವಾಗುತ್ತದೆ. ಅಂತಹ ಒಂದು ಒಳ್ಳೆಯ ನಿದರ್ಶನ ವಿರಾಜ್‌ಪೇಟೆ, ಕುಶಾಲನಗರ, ಮೈಸೂರು, ಮಡಿಕೇರಿ, ಸುಳ್ಯ, ಪುತ್ತೂರು ಹಾಗೂ ವಿಟ್ಲದವರೆಗೆ ಪಸರಿಸಿರುವ ಅರೆಭಾಷೆ ಎಂದು ಸ್ವತಃ ಮಾಧ್ಯಮ ಹಿನ್ನಲೆ ಹೊಂದಿರುವ ಕೊಡಗು ಮತ್ತು ಮೈಸೂರು ಕ್ಷೇತ್ರದ ಯುವ ಸಂಸದರಾದ ಶ್ರೀ ಪ್ರತಾಪ್‌ಸಿಂಹ ಅವರು ಹೇಳಿದರು. ಅವರು ಕರ್ನಾಟಕ ಅರೆಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ, ಮಡಿಕೇರಿ ಹಾಗೂ ದೆಹಲಿ ಕರ್ನಾಟಕ ಸಂಘದ ಸಹಯೋಗದಲ್ಲಿ ಸಂಘದಲ್ಲಿ ಏರ್ಪಡಿಸಲಾಗಿದ್ದ 'ದೆಹಲಿಯಲ್ಲಿ ಸಾಂಸ್ಕೃತಿಕ ಸಂಗಮ' ಎಂಬ ಕಾರ್ಯಕ್ರಮವನ್ನು ಇದೇ ಡಿಸೆಂಬರ್ 12ರಂದು ಉದ್ಘಾಟಿಸುತ್ತಾ ಮಾತಾಡುತ್ತಿದ್ದರು.

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ, ಮಡಿಕೇರಿ ಇದರ ಅಧ್ಯಕ್ಷರಾದ ಶ್ರೀ ಕೊಲ್ಯದ ಗಿರೀಶ್ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತಾಡುತ್ತಾ ಅರೆಭಾಷೆ ಹಾಗೂ ಅದರ ಸಾಹಿತ್ಯ ಸಂಸ್ಕೃತಿಯನ್ನು ಉಳಿಸಿ, ಬೆಳೆಸುವಲ್ಲಿ ಅಕಾಡೆಮಿ ಮಾಡುತ್ತಾ ಬಂದಿರುವ ಅನೇಕ ಕಾರ್ಯಕ್ರಮಗಳನ್ನು ಪರಿಚಯಿಸಿದರು. ಮುಂದೆ ಅಕಾಡೆಮಿ ಮಾಡಬೇಕೆಂದುಕೊಂಡಿರುವ ಹಲವು ಯೋಜನೆಗಳ ಮೇಲೆಯೂ ಅವರು ಬೆಳಕು ಚೆಲ್ಲಿದರು.

ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥ ಡಾ. ಪುರುಷೋತ್ತಮ ಬಿಳಿಮಲೆ ಅವರು ಮಾತನಾಡುತ್ತಾ ಅರೆಭಾಷೆ ಅಕಾಡೆಮಿ ಭಾಷೆಯ ಅಧ್ಯಯನ, ಪ್ರಸಾರ ಹಾಗೂ ಬಳಸುವಿಕೆಯನ್ನು ಇನ್ನೂ ಹೆಚ್ಚು ಮುತುವರ್ಜಿಯಿಂದ ನಡೆಸಿಕೊಂಡು ಬರಬೇಕು. ಸಂಶೋಧನೆ ಮತ್ತು ಪ್ರಕಾಶನಕ್ಕಾಗಿ ಒತ್ತುಕೊಟ್ಟು ಒಳ್ಳೆಯ ವಿದ್ವಾಂಸರಿಂದ ಕನ್ನಡದ ನಾಟಕ, ಕವನ, ಕಥೆಗಳನ್ನು ಅರೆಭಾಷೆಗೆ ಭಾಷಾಂತರಿಸುವಂತಾಗಬೇಕು ಅಲ್ಲದೆ ಸುಮಾರು 500ವರ್ಷಕ್ಕೂ ಹೆಚ್ಚು ಇತಿಹಾಸವುಳ್ಳ ಸಾಂಸ್ಕೃತಿಕವಾಗಿ ಅತ್ಯಂತ ಸಂಪದ್ಭರಿತವಾದ ಈ ಒಂದು ಪುಟ್ಟ ಭಾಷೆಯನ್ನು ಹೆಚ್ಚು ಹೆಚ್ಚು ಜನಕ್ಕೆ ತಲುಪುವಂತೆ ಮಾಡಿ ಉಳಿಸಿ, ಬೆಳೆಸಬೇಕಾಗಿದೆ ಎಂದರು. ಜಗತ್ತಿನಲ್ಲಿ ಈಗಾಗಲೇ ಹಲವಾರು ಇಂತಹ ಸಣ್ಣ ಸಣ್ಣ ಭಾಷೆಗಳು ಇಂಗ್ಲಿಷ್ ಹಾಗೂ ಇನ್ನಿತರ ಬಾಹ್ಯ ಭಾಷೆಗಳ ಹೊಡೆತಕ್ಕೆ ಒಳಗಾಗಿ ಅತ್ಯಂತ ರಭಸದಿಂದ ನಶಿಸಿಹೋಗುತ್ತಿವೆ ಎಂದು ಎಚ್ಚರಿಕೆ ನೀಡಿದರು.

ಚಾಮರಾಜನಗರ ಕ್ಷೇತ್ರದ ಶಾಸಕ ಶ್ರೀ ವಾಸು, ಅವರು ಮಾತನಾಡುತ್ತಾ ಅರೆಭಾಷೆ ನನ್ನ ಮಾತೃಭಾಷೆ, ಅತ್ಯಂತ ಸರಳ ಹಾಗೂ ಸುಂದರವಾದ ಮಾರ್ಮಿಕ ಭಾಷೆ ಇದು ಎಂದು ನುಡಿದರು. ಮೈಸೂರು ಮಡಿಕೇರಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಹಲವಾರು ಪ್ರದೇಶಗಳಲ್ಲಿ ಸಾವಿರಾರು ಮಂದಿ ಈ ಭಾಷೆ ಮತ್ತು ಸಂಸ್ಕೃತಿಯನ್ನು ಆಡಿ ಆಚರಿಸಿಕೊಂಡು ಬರುತ್ತಿದ್ದಾರೆ. ಇದು ಇನ್ನೂ ದೊಡ್ಡದಾಗಿ ಬೆಳೆದು ಈ ಪ್ರದೇಶಕ್ಕೆ ಹಾಗೂ ರಾಜ್ಯಕ್ಕೆ ಇನ್ನೂ ಹೆಚ್ಚಿನ ಕೊಡುಗೆ ನೀಡುವಂತಾಗಬೇಕು ಎಂದು ನುಡಿದರು.

ವಿರಾಜ್‌ಪೇಟೆ ಕ್ಷೇತ್ರದ ಶಾಸಕ ಹಾಗೂ ಮಾಜಿ ವಿಧಾನ ಸಭಾಧ್ಯಕ್ಷರಾದ ಶ್ರೀ ಕೊಂಬಾರನ ಬೋಪಯ್ಯ ಅವರು ಮಾತನಾಡುತ್ತಾ ಶ್ರೀ ಡಿ.ವಿ. ಸದಾನಂದ ಗೌಡ ಅವರು ಕರ್ನಾಟಕ ಮುಖ್ಯಮಂತ್ರಿಗಳಾಗಿದ್ದಾಗ ವಿಧಾನಸಭೆಯ ಕಾರ್ಯದರ್ಶಿ ಹಾಗೂ ತಾವು ಜೊತೆಗೂಡಿ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯನ್ನು ಸ್ಥಾಪಿಸುವಲ್ಲಿ ಪಟ್ಟ ಪ್ರಯತ್ನವನ್ನು ಸಭಿಕರೊಡನೆ ಹಂಚಿಕೊಂಡರು. ಇಂದು ಈ ಅಕಾಡೆಮಿ ಕರ್ನಾಟಕ ರಾಜ್ಯದಾದ್ಯಂತ ಅರೆಭಾಷೆ ಮತ್ತು ಸಂಸ್ಕೃತಿಯ ಕಂಪನ್ನು ಬೀರಿ ಇದು ದೇಶದ ರಾಜಧಾನಿ ದೆಹಲಿಯಲ್ಲಿ ಮೊಟ್ಟಮೊದಲ ಬಾರಿಗೆ ಒಂದು ಉತ್ತಮ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸುತ್ತಿರುವುದು ನನಗೆ ಅತ್ಯಂತ ಸಂತೋಷ ನೀಡಿದೆ ಎಂದು ನುಡಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮಾತನಾಡುತ್ತಾ ಕರ್ನಾಟಕದ ಎಲ್ಲಾ ಭಾಷೆಗಳು–ಕೊಂಕಣಿ, ತುಳು, ಲಂಬಾಣಿ, ಅರೆಭಾಷೆ ಸೇರಿದಂತೆ ಬೆಳೆಯಲು ಪ್ರತಿಯೊಬ್ಬ ಕನ್ನಡಿಗರು ಶ್ರಮಿಸಬೇಕು ಆ ನಿಟ್ಟಿನಲ್ಲಿ ಅರೆಭಾಷೆ ಅಕಾಡೆಮಿ ಇಂದು ನಡೆಸುತ್ತಿರುವ ಈ ಸಾಂಸ್ಕೃತಿಕ ಕಾರ್ಯಕ್ರಮ ಒಂದು ಚಾರಿತ್ರಿಕ ಹೆಜ್ಜೆ ಎಂದು ನುಡಿದರು. ದೆಹಲಿ ಕರ್ನಾಟಕ ಸಂಘ ಕರ್ನಾಟಕದ ಎಲ್ಲಾ ಭಾಷೆಗಳ ಅಭಿವೃದ್ಧಿಗೆ ಬದ್ಧವಾಗಿದೆ ಹಾಗೂ ಈಗಾಗಲೇ ಈ ನಿಟ್ಟಿನಲ್ಲಿ ನಾವು ಹಲವಾರು ಕಾರ್ಯಕ್ರಮಗಳನ್ನು ಅಳವಡಿಸಿಕೊಂಡಿದ್ದೇವೆ ಬರುವ ಎಲ್ಲ ಅಕಾಡೆಮಿಗಳಿಗೆ ನಾವು ದೆಹಲಿ ಕರ್ನಾಟಕ ಸಂಘದಲ್ಲಿ ಸಮಾನವಾದ ಸಹಕಾರ, ಪ್ರೀತಿ, ಗೌರವಗಳನ್ನು ನೀಡಿ ಆಧರಿಸುತ್ತೇವೆ ಎಂದು ನುಡಿದರು.

ವಾಣಿಜ್ಯ ತೆರಿಗೆ ಇಲಾಖೆ, ಕರ್ನಾಟಕದ ನಿವೃತ್ತ ಜಂಟಿ ಆಯುಕ್ತರಾದ ಶ್ರೀ ನಂಗಾರು ನಾಣಯ್ಯ, ಕೃಷಿಕ್ ಸರ್ವೋದಯ ಫೌಂಡೇಶನ್, ನವದೆಹಲಿ ಶಾಖೆ ಅಧ್ಯಕ್ಷರಾದ ಶ್ರೀ ಎನ್.ಎ. ಮಾಧವ ಅವರೂ ಈ ಸಂದರ್ಭದಲ್ಲಿ ಮಾತಾಡಿದರು.

ಶ್ರೀ ಐ.ಎಸ್. ಭಾವೀಕಟ್ಟೆ, ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೊಡಗು ಇವರು ಸ್ವಾಗತಿಸಿದರು. ಡಾ. ಕೋರನ ಸರಸ್ವತಿ ಪ್ರಕಾಶ್ ಅವರು ಕಾರ್ಯಕ್ರಮವನ್ನು ನಿರ್ವಹಿಸಿದರು. ಶ್ರೀ ಉಮರಬ್ಬ, ರಿಜಿಸ್ಟ್ರಾರ್, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ವಂದನಾರ್ಪಣೆ ಸಲ್ಲಿಸಿದರು. ಡಾ. ಪೂವಪ್ಪ ಕಣಿಯೂರು ಆಶಯ ನುಡಿ ಪ್ರಸ್ತುತಪಡಿಸುತ್ತಾ ಅರೆಭಾಷೆಯ ಮೂಲ ಬೆಳೆದು ಬಂದ ದಾರಿ ಮತ್ತು ಆಗಬೇಕಾದ ಕೆಲಸಗಳ ಬಗ್ಗೆ ವಿವರವಾಗಿ ತಿಳಿಸಿದರು.

ದೆಹಲಿ ಕರ್ನಾಟಕ ಸಂಘದ ಜಂಟಿ ಕಾರ್ಯದರ್ಶಿ ಶ್ರೀ ಟಿ.ಪಿ. ಬೆಳ್ಳಿಯಪ್ಪ ಅವರು ಈ ಕಾರ್ಯಕ್ರಮವನ್ನು ಸಂಯೋಜಿಸುವಲ್ಲಿ ಅತ್ಯಂತ ಶ್ರದ್ಧೆಯಿಂದ ದುಡಿದಿದ್ದು, ಅರೆಭಾಷೆ ಅಕಾಡೆಮಿ ಮತ್ತು ದೆಹಲಿ ಕರ್ನಾಟಕ ಸಂಘದ ನಡುವೆ ಸಾಂಸ್ಕೃತಿಕ ಸೇತುವೆಯಾಗಿ ಕಾರ್ಯಕ್ರಮದ ಯಶಸ್ಸಿಗೆ ಕಾರಣಕರ್ತರಾದರು.


## ಸಾಂಸ್ಕೃತಿಕ ಕಾರ್ಯಕ್ರಮ

ಸಭಾ ಕಾರ್ಯಕ್ರಮದ ನಂತರ ನಡೆದ ವೈವಿಧ್ಯಮಯ ಅರೆಭಾಷೆ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಆ ಪ್ರದೇಶದಿಂದ ಬಂದಿದ್ದ ನೂರಾರು ಮಂದಿ ಕಲಾವಿದರು ಸುಮಾರು ಐದು ತಾಸುಗಳ ಕಾಲ ಸತತವಾಗಿ ಅದ್ಭುತವಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿ ನೆರೆದಿದ್ದವರ ಮನಸೂರೆಗೊಂಡರು. ಭಾಗಮಂಡಲದ ನಾಟ್ಯ ಮಿಲನ ನೃತ್ಯ ಶಾಲೆಯವರು ಪ್ರಸ್ತುತಪಡಿಸಿದ ಗೌಡರ ಸಿರಿ ಸಂಸ್ಕೃತಿ ದರ್ಶನ ರಂಗುರಂಗಿನ ಕಾರ್ಯಕ್ರಮದಲ್ಲಿ ಮಡಿಕೇರಿ ಪ್ರದೇಶದ ಜನರ ಎಲ್ಲಾ ತರದ ಜೀವನಕ್ಕೆ ಸಂಬಂಧಿಸಿದಂತೆ ಅತ್ಯಂತ ಸ್ವಾಭಾವಿಕ ಮತ್ತು ಮಣ್ಣಿನ ವಾಸನೆಯಿಂದ ಕೂಡಿದ ಹಾಡು, ನೃತ್ಯ, ಕುಣಿತಗಳನ್ನು ಪ್ರದರ್ಶಿಸಿದರು.

ಶ್ರೀ ಕುದುಪಜ್ಜೆ ಪ್ರಕಾಶ್ ಮತ್ತು ಬಳಗ, ಭಾಗಮಂಡಲದ ಕಲಾವಿದರು ಸಂಪ್ರಾದಾಯಿಕ ಉಡುಗೆ ತೊಡುಗೆ ತೊಟ್ಟು, ಡೋಲು ಹಾಗೂ ಹಾಡಿಗೆ ತಕ್ಕಂತೆ ಹೆಜ್ಜೆ ಮತ್ತು ಕೋಲು ಹಾಕಿ ಪ್ರದರ್ಶಿಸಿದ ಅರೆಭಾಷೆ ಸಂಪ್ರದಾಯ ಕೋಲಾಟ ನೆರೆದಿದ್ದ ಜನರನ್ನು ಅರ್ಧತಾಸಿನ ಕಾಲ ಭಾಗಮಂಡಲಕ್ಕೆ ಕೊಂಡೊಯ್ಯಿತು.

ವಿದೂಷಿ ಪ್ರಮೀಳಾ ಲೋಕೇಶ್ ಮತ್ತು ಬಳಗದವರು ಪ್ರಸ್ತುತಪಡಿಸಿದ 'ಹೆಜ್ಜೆಗೆಜ್ಜೆ ನೀನಾದೊಳಗೆನುಟ್ಟು' ಹೇಮಾವತಿ ನದಿ ಮತ್ತು ಅದರ ದಡದಲ್ಲಿ ಬೆಳೆದು ಬಂದ ಅರೆಭಾಷೆ ಸಂಸ್ಕೃತಿ, ಸಂಪ್ರದಾಯಗಳನ್ನು ಬಹಳ ಮಾರ್ಮಿಕವಾಗಿ ತಮ್ಮ ಹಾಡು, ನೃತ್ಯಗಳ ಮೂಲಕ ಪ್ರದರ್ಶಿಸುತ್ತಾ ಅರೆಭಾಷೆ ಗೌಡ ಜನಾಂಗ








ಕಾರಣಾಂತರಗಳಿಂದ ಹೇಗೆ ಮಡಿಕೇರಿಯಿಂದ ದಕ್ಷಿಣ ಕನ್ನಡದ ಪುತ್ತೂರು, ಸುಬ್ರಹ್ಮಣ್ಯ, ಸುಳ್ಯದೆಡೆಗೆ ಘಟ್ಟದಿಂದ ಇಳಿದುಬಂದರು ಎಂಬುದನ್ನು ಅತ್ಯಂತ ಮಾರ್ಮಿಕವಾಗಿ ಬಾಲೆಯರ ತಂಡ ತೆರೆದಿಟ್ಟಿತು.

ತದನಂತರ ಮನಸ್ವಿ ರಾಜೇಂದ್ರ, ದೆಹಲಿ ಅವರ ಭರತನಾಟ್ಯ, ಮಾಸ್ಟರ್ ಎ.ವಿ. ಲವೀನ್ ಮತ್ತು ಕುಮಾರಿ ಎ.ವಿ. ರಕ್ಷಾ ಅವರ ಅರೆಭಾಷೆ ಯಕ್ಷಗಾನ ವೈಭವ ಮತ್ತು ಭರತನಾಟ್ಯ, ಶ್ರೀಮತಿ ಜಯಾ ಶ್ರೀನಿವಾಸ್ ದೆಹಲಿ ಅವರ ಸೋಬಾನೆ ಹಾಡು, ಶ್ರೀ ಟಿ.ಪಿ. ಬೆಳ್ಳಿಯಪ್ಪ ಮತ್ತು ಬಳಗ, ದೆಹಲಿ ಇವರ ಕೋಲಾಟ ನೃತ್ಯ ನೆರೆದ ಜನರ ಮನರಂಜಿಸಿದವು.

'ಕಲಾಸಿರಿ' ಮಡಿಕೇರಿ ತಂಡದ ಯುವತಿಯವರು ಪ್ರಸ್ತುತಪಡಿಸಿದ ರಾಧಾಕೃಷ್ಣ ನೃತ್ಯಲೀಲೆಯಂತೂ ಪ್ರೇಕ್ಷಕರನ್ನು ಶ್ರೀಕೃಷ್ಣನ ಮಥುರಾಕ್ಕೆ ಕೊಂಡೊಯ್ಯಿತು. ನೃತ್ಯರೂಪಕದಲ್ಲಿ ಬಳಸಿದ ವೇಷಭೂಷಣಗಳು, ಪರಿಕರಗಳು ಹಾಗು ನೃತ್ಯ ಸಂಯೋಜನೆ ಅತ್ಯಂತ ಪರಿಣಾಮಕಾರಿಯಾಗಿತ್ತು. ಈ ಎಲ್ಲಾ ಕಾರ್ಯಕ್ರಮಗಳ ಮಧ್ಯೆಮಧ್ಯೆ ಶ್ರೀ ಲಕ್ಷ್ಮೀಕಾಂತ ಮೂಲೆಮಜಲು, ಮತ್ತು ಸಂಗಡಿಗರು ಲಯಬದ್ಧವಾಗಿ ಹಾಡಿದ ಹಲವಾರು ಅರ್ಥಗರ್ಭಿತವಾದ ಅರೆಭಾಷೆ ಹಾಡುಗಳು ಸಭಿಕರಿಗೆ ಮುದನೀಡಿತು.

ಕಾರ್ಯಕ್ರಮದಲ್ಲಿ ಕೊನೆಯಲ್ಲಿ ಮೂಡಿಬಂದ 'ಕೊಡಗು ಗೌಡ ಯುವ ವೇದಿಕೆ' ಮಡಿಕೇರಿ ನೀಡಿದ ಅಪ್ಪಾಜಿ ಗೌಡ ಜೀವನ ಆಧಾರಿತ ವೀರಪರಂಪರೆ ಎಂಬ ನೃತ್ಯರೂಪಕವು ಅರೆಭಾಷೆ ಜನಾಂಗದ ವೀರತ್ವ, ದೇಶಭಕ್ತಿ ಹಾಗೂ ಸಂಸ್ಕೃತಿಯ ಝಳಕನ್ನು ಬಹಳ ಅದ್ಭುತವಾಗಿ ಪ್ರದರ್ಶಿಸಿತು.


ಕಾರ್ಯಕ್ರಮದುದ್ದಕ್ಕೂ ಎಲ್ಲಾ ಕಲಾವಿದರು ತಮ್ಮ ಹುತ್ತರಿ ಹಾಡು, ಸಿದ್ದವೇಷ ಕುಣಿತ, ನೃತ್ಯ, ಕೋಲಾಟ, ದಾಸಯ್ಯ ಜೋಗಯ್ಯರ ನೃತ್ಯ, ಭೂತ, ಆಟಿ ಕಳಂಜ, ನಾನಾ ರೀತಿಯ ದೈವ ದೇವತೆಗಳ ಆರಾಧನೆ, ಪೂಜೆ, ಪುನಸ್ಕಾರಗಳು ನೆರೆದಿದ್ದ ಸಭಿಕರಿಗೆ ಮಡಿಕೇರಿಯ ಅರೆಭಾಷೆ ಆಡುವ ಜನರ ಸರಳ ಜೀವನ, ಸ್ವಾಭಿಮಾನ, ದೇಶಭಕ್ತಿ, ಕಷ್ಟಸಹಿಷ್ಣುತೆ, ಪ್ರಾಮಾಣಿಕತನ ಹಾಗೂ ವೀರತನದ ಪರಿಚಯ ಮಾಡುತ್ತಾ ಮಡಿಕೇರಿ ಮತ್ತು ಸುತ್ತಮುತ್ತಲಿನ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನ ಕಣ್ಣಿಗೆ ಕಟ್ಟಿದಂತೆ ಪ್ರದರ್ಶಿಸಿದರು. ಅ

*ಸಖಾರಾಮ ಉಪ್ಪೂರು*

# ಗುರುದೇವ ಆರ್.ಡಿ. ರಾನಡೆ ಅವರ ತತ್ವಜ್ಞಾನ ಸಂಸ್ಥೆಯ ನವದೆಹಲಿ ಕೇಂದ್ರ ಆರಂಭ

ಬೆಳಗಾವಿಯ ಅಕಾಡೆಮಿ ಆಫ್ ಕಂಪೇರೇಟಿವ್ ಫಿಲಾಸಫಿ ಎಂಡ್ ರಿಲಿಜನ್‌ನ ನವದೆಹಲಿ ಕೇಂದ್ರವನ್ನು ಕೇಂದ್ರ ರಸ್ತೆ ಸಾರಿಗೆ ಸಚಿವರಾದ ಶ್ರೀ ನಿತಿನ್ ಗಡ್ಕರಿ ಅವರು ಇದೇ ಡಿಸೆಂಬರ್ 10ರಂದು ನವದೆಹಲಿಯ ಇಂಡಿಯಾ ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಅವರು ಮಾತಾಡುತ್ತಾ ಕರ್ನಾಟಕದ ಜಮಖಂಡಿಯಲ್ಲಿ 1886ರಲ್ಲಿ ಜನಿಸಿದ ತತ್ವಜ್ಞಾನಿ ಗುರ್‌ದೇವ್ ಡಾ. ಆರ್.ಡಿ. ರಾನಡೆ ಅವರು ತತ್ವಜ್ಞಾನ ಮತ್ತು ಭಾರತದ ಸಂಸ್ಕೃತಿಗೆ ನೀಡಿದ ಭವ್ಯ ಕೊಡುಗೆಯನ್ನು ಕೊಂಡಾಡಿದರು.

ದೆಹಲಿ ವಿಶ್ವವಿದ್ಯಾನಿಲಯದ ನಿವೃತ್ತ ತತ್ವಶಾಸ್ತ್ರದ ಪ್ರಾಧ್ಯಾಪಕರಾದ ಶ್ರೀ ಎಸ್.ಆರ್. ಭಟ್ ಅವರು ಡಾ. ರಾನಡೆ ಅವರ ಜೀವನ, ಬರವಣಿಗೆ ಹಾಗೂ ದಾರ್ಶನಿಕ ದೃಷ್ಟಿಕೋನವನ್ನು ಸಭೆಗೆ ಪರಿಚಯಿಸಿದರು. ಡಾ. ರಾನಡೆ ಅವರು ಕನ್ನಡ ಮತ್ತು ಇಂಗ್ಲಿಷ್ ಮಾತ್ರವಲ್ಲದೆ ಗ್ರೀಕ್ ಹಾಗೂ ಫ್ರೆಂಚ್ ಭಾಷೆಯ ಪಾಂಡಿತ್ಯವನ್ನೂ ಪಡೆದ ವಿದ್ವಾಂಸರಾಗಿದ್ದರು ಎಂದು ಅವರು ನುಡಿದರು.




ಇದೇ ಸಂದರ್ಭದಲ್ಲಿ ಡಾ. ಆರ್.ಡಿ. ರಾನಡೆ ಅವರ ಸಿಂಥೆಟಿಕ್ ಮಿಸ್ಟಿಸಿಸಂ ಆಫ್ ಸಂತ ಏಕನಾಥ್ ಮತ್ತು ಆಕ್ಟಿವಿಸ್ಟಿಕ್ ಮಿಸ್ಟಿಸಿಸಂ ಆಫ್ ಸಮರ್ಥ ರಾಮದಾಸ್ ಎಂಬ ಎರಡು ಕೃತಿಗಳನ್ನು ಬಿಡುಗಡೆಗೊಳಿಸಲಾಯಿತು.

ಈ ಮಹಾಸಂಸ್ಥೆಯ ಘಟಕವು ದೆಹಲಿಯ ಮಯೂರ್ ವಿಹಾರ್‌ದಲ್ಲಿ ಪ್ರಾರಂಭವಾಗಿದೆ. ಕರ್ನಾಟಕದ ಸಂಸದರಾದ ಶ್ರೀ ಪ್ರಹ್ಲಾದ ಜೋಷಿ ಮತ್ತು ಶ್ರೀ ಸುರೇಶ್ ಅಂಗಡಿ ಹಾಗೂ ಅಕಾಡೆಮಿ ಆಫ್ ಫಿಲೋಸೋಫಿ ಅಂಡ್ ರಿಲಿಜಿಯನ್ ಸಂಸ್ಥೆಯ ಶ್ರೀ ಮಾರುತಿ ಬಿ ಜಿರಳಿ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಆರಂಭದಲ್ಲಿ ಪುಣೆಯ ಫರ್ಗುಸನ್ ಕಾಲೇಜಿನಲ್ಲಿ ತತ್ವಶಾಸ್ತ್ರದ ಪ್ರಾಧ್ಯಾಪಕರಾಗಿ, ಆನಂತರ ಅಲಹಾಬಾದ್ ವಿಶ್ವವಿದ್ಯಾನಿಲಯದಲ್ಲಿ ತತ್ವಶಾಸ್ತ್ರದ ಪ್ರಾಧ್ಯಾಪಕರಾಗಿ ಮತ್ತು ವಿಶ್ವವಿದ್ಯಾಲಯದ ವೈಸ್‌ಚಾನ್ಸಲರ್ ಆಗಿ ಸೇವೆ ಸಲ್ಲಿಸಿದ್ದ ಡಾ. ಆರ್.ಡಿ. ರಾನಡೆ ಅವರು ಕರ್ನಾಟಕ ಕಂಡ ಒಬ್ಬ ವಿಶ್ವವಿಖ್ಯಾತ ದಾರ್ಶನಿಕ. ಡಾ. ರಾನಡೆ ಅವರು ಪುಣೆಯಲ್ಲಿ 1924ರಷ್ಟು ಹಿಂದೆಯೇ ಕನಸು ಕಂಡಿದ್ದ ಅಕಾಡೆಮಿ ಆಫ್ ಕಂಪೇರೇಟಿವ್ ಫಿಲಾಸಫಿ ಎಂಡ್ ರಿಲಿಜನ್ ಸಂಸ್ಥೆಯನ್ನು 1952ರಲ್ಲಿ ಬೆಳಗಾವಿಯಲ್ಲಿ ನೊಂದಾಯಿಸಿ ನಡೆಸಿಕೊಂಡು ಬಂದರು. ಡಾ. ರಾನಡೆ ಅವರ 24 ಕೃತಿಗಳು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಪ್ರಕಟವಾಗಿದ್ದು ಅವುಗಳಲ್ಲಿ ಕೆಲವು ಮರಾಠಿ, ಹಿಂದಿ, ಫ್ರೆಂಚ್ ಭಾಷೆಗಳಿಗೂ ತರ್ಜುಮೆಗೊಂಡಿವೆ. ಈ ಸಂಸ್ಥೆಯು ಪ್ರತಿ ವರ್ಷವೂ ತಪ್ಪದೆ ದಾರ್ಶನಿಕ ಮತ್ತು ಹಿಂದು ತತ್ವಜ್ಞಾನದಲ್ಲಿ ಹಲವಾರು ಉತ್ತಮ ಪುಸ್ತಕಗಳನ್ನು ಮತ್ತು ನಿಯತಕಾಲಿಕಗಳನ್ನು ಪ್ರಕಟಿಸುತ್ತಾ ಬಂದಿದ್ದು, ದೇಶ ಹಾಗೂ ವಿಶ್ವದ ನಾನಾ ಕಡೆಗಳಲ್ಲಿ ಉತ್ತಮ ಚರ್ಚೆಗೆ ದಾರಿ ಮಾಡಿಕೊಟ್ಟಿದೆ. ಅ

*ಅಭಿಮತ ವರದಿ*

# ಅಸಮರೂಪಿ ಗಣಪನ ಮದುವೆ!

“ಘಟ್ಟ ಬೆಟ್ಟದ ತುಟ್ಟ ತುದಿಯಲಿ ಹಿಟ್ಟು ಮುಕ್ಕುವ ಹೊಟ್ಟೆ ಗಣಪತಿಗೆ ಇಪ್ಪತ್ತೊಂದು ನಮಸ್ಕಾರಗಳು! ಬೆನಕ ಬೆನಕ ಏಕದಂತ ಪಚ್ಚೆಕಲ್ಲು ಪಾಣಿ ಪೀಠ ಮುತ್ತಿನುಂಡೆ ಹೊನ್ನ ಘಂಟೆ ಒಪ್ಪುವಂತಹ ಶ್ರೀಸಿದ್ಧಿ ಬುದ್ಧಿ ವಿನಾಯಕನಿಗೆ ಇಪ್ಪತ್ತೊಂದು ನಮಸ್ಕಾರಗಳು” ಎಂದು ಪ್ರಾರ್ಥಿಸಿ



ಸ್ತ್ರೀಶಕ್ತಿ ಸ್ವರೂಪಿಣಿ ತನ್ನ ಬೆವರು ಸುರಿಸಿ ಸೃಷ್ಟಿಸಿದ ಗಣಪನ ತಲೆ ಕಡಿದು ತನ್ನ ಪತ್ನಿ ಅರ್ಧನಾರೀಶ್ವರಿಯ ಕೋಪಕ್ಕೆ ಪಾತ್ರನಾಗಿ, ಉತ್ತರ ದಿಕ್ಕಿಗೆ ತಲೆ ಹಾಕಿ ಮಲಗಿರುವ ಜೀವಿಯ ತಲೆ ಕತ್ತರಿಸಿ ತರುವಂತೆ ತನ್ನ ಗಣಗಳಿಗೆ ಆಜ್ಞೆ ಮಾಡಿದ ಈಶ್ವರ; ಅವರು ತಂದ ಕೂಡಲೆ, ಜೈವಿಕ-ತಂತ್ರಜ್ಞಾನ ತಜ್ಞನಾದ ಆ ಪರಮಾತ್ಮ ಗಣಪನ ಮುಂಡದೊಡನೆ ಆ ಗಜರಾಜನ ರುಂಡ ಜೋಡಿಸಿ ಕೊನೆಗೆ ತನ್ನ ಪ್ರಿಯ ಪತ್ನಿಯ ಪ್ರೀತಿ ಗಳಿಸಿಯೇ ಬಿಟ್ಟ. ಈ ಪುರಾಣ ಕಥೆ ಎಲ್ಲರಿಗೂ ಗೊತ್ತೇ ಇದೆ ತಾನೆ! ಬನ್ನಿ ಮುಂದಿನ ಕಥೆ ಮುಂದುವರಿಸೋಣ.

“ಹೆತ್ತವರಿಗೆ ಹೆಗ್ಗಣ ಮುದ್ದು” ಎಂಬ ಗಾದೆಯಂತೆ ಈ ವಿಚಿತ್ರ ರೂಪದ ಮಗ ಗಜಾನನನ್ನು ಶಿವಪಾಣಿಯರು ಬಹಳ ಅಕ್ಕಾಸ್ತೆಯಿಂದ ಬೆಳೆಸಿದರು. ಪಾರ್ವತಿಗಂತೂ ತನ್ನ ಮಗನನ್ನು ಎಷ್ಟು ಮುದ್ದು ಮಾಡಿದರೂ ಸಾಲದು; ಎಷ್ಟು ತಿಂಡಿ ತೀರ್ಥ ಮಾಡಿ ತಿನ್ನಿಸಿ ಕುಡಿಸಿದರೂ ಸಾಲದು; ಎಷ್ಟು ತರಹ ಲಾಡು, ಉಂಡೆ, ಮೋದಕ, ಮಿಠಾಯಿ, ಪಾಯಸ, ಕಡಬು ತಿಂದು ತಿಂದು ಭಲಾ! ಬಹು ಬೆಳೆದೆ ಬೆಳೆದೆ ಎಂದು ಗುಂಡು ಗುಂಡಾಗಿ ಬೆಳೆದು ಬಿಟ್ಟ ಈ ಗಣೇಶ! ಪ್ರಕೃತಿ ಕೊಟ್ಟ ಈ ಹೊಟ್ಟೆ ಎಂಬ ಚೀಲ ಎಷ್ಟು ಗಟ್ಟಿ; ಎಷ್ಟು ದೊಡ್ಡದು; ಬಲೂನಿನಂತೆ ಹಿಗ್ಗುತ್ತಾ ಹೋದರೂ ಒಡೆಯದಂತಹ ಚೀಲ!

ಸುಮೋ ಪಹಲ ವಾನನಂತೆ ಬೆಳೆಯುತ್ತಿರುವ ಮಗನನ್ನು ನೋಡಿ ತಾಯಿಗೆ ಸಂತೋಷವೋ ಸಂತೋಷ! ಅಂತೆಯೇ ಅವಳಿಗೆ ಒಂದು ಯೋಚನೆಯೂ ಕಾಡಲು ಶುರುವಾಯಿತು. ಮಗನೀಗ ಯುವಕ; ಅವನಿಗೆ ಸಕಾಲಕ್ಕೆ ಮದುವೆ ಮಾಡಬೇಕು ಎಂದೆಲ್ಲಾ ಚಿಂತೆಯಾಯಿತು.

ಒಂದು ದಿನ, ಸಾಯಂಕಾಲ ಪಾರ್ವತಿ ತನ್ನ ಕೆಲಸಗಳನ್ನು ಪೂರೈಸಿಕೊಂಡು ಪುರುಸೊತ್ತು ಮಾಡಿಕೊಂಡು ಮಗನನ್ನು ಕರೆದು ಕೂರಿಸಿಕೊಂಡು ಹೇಳಿದಳು ಪಾರ್ವತಿ. “ನೋಡು ಗಣೇಶ ನೀನೀಗ ಮದುವೆ ವಯಸ್ಸಿಗೆ ಬಂದಿದ್ದೀಯಾ. ನನ್ನನ್ನು ಎಲ್ಲರೂ ಕೇಳುತ್ತಿದ್ದಾರೆ. ಮದುವೆ ಮಾಡಿ ಎಂದು. ನಿಮ್ಮಪ್ಪನಾದರೋ ಭಸ್ಮ ಬಳಿದುಕೊಂಡು ಸೊಂಟಕ್ಕೆ ಹುಲಿಚರ್ಮ ಕಟ್ಟಿಕೊಂಡು ಕಾಡು ಮೇಡು ಅಂತ ಅಲೆಯುತ್ತಾ ಆಗಾಗ್ಗೆ  ಯಾವುದೋ ಕೋಪದಿಂದ ಕಣ್ಣು ಕೆಂಪು ಮಾಡಿಕೊಂಡು ಪ್ರಳಯ ನೃತ್ಯ ಮಾಡುತ್ತಿರುತ್ತಾನೆ. ತಲೆಯಲ್ಲಿ ಗಂಗೆ ಕೂರಿಸಿಕೊಂಡು, ಹಾವು, ರುದ್ರಾಕ್ಷಿ ಮಾಲೆ, ಚಂದ್ರನನ್ನು ಜಟೆಯಲ್ಲಿ ಸಿಕ್ಕಿಸಿಕೊಂಡು ಬರುತ್ತಿದ್ದರೆ ನನಗೆ ಒಂದು ತರಹ ಭಯ ಅವನೊಡನೆ ಮಾತಾಡಲು. ಸಂಸಾರದ ಬಗ್ಗೆ ಯೋಚನೆಯೇ ಇಲ್ಲ. ನಾನು ಹೇಗೋ ಮನೆಕೆಲಸ, ಸ್ತ್ರೀಶಕ್ತಿ ಸಬಲೀಕರಣದ ಸಮಾಜ ಸೇವೆಯಿಂದ ತೆಡಿಗೆ ತಿಂಡಿ-ವಿವಿಧ ರೀತಿಯ ತಿನಿಸುಗಳು ಮಾಡುವುದರಲ್ಲೇ ಸಮಯ ಕಳೆದುಹೋದ್ದು ಗೊತ್ತಾಗೊಲ್ಲಾ. ನಾನು ಹೆಣ್ಣು ಹುಡುಕಲು ಹೋಗುವುದೇ ಆಗುತ್ತಿಲ್ಲ” ಎಂದು ಮಗನೊಡನೆ ತನ್ನ ತೊಳಲಾಟ ತೋಡಿಕೊಂಡು ಪುನಃ ಯೋಚಿಸಿ ಹೀಗೆಂದಳು “ನೀನು ಒಂದು ಕೆಲ್ಸಾ ಮಾಡು ಎಲ್ಲರೂ ಹೇಳ್ತಾರೆ ಈಗಿನ ಕಾಲದಲ್ಲಿ ಮಕ್ಕಳೇ ತಮ್ಮ ಸಂಗಾತಿಯನ್ನು ಹುಡುಕಿಕೊಳ್ಳುತ್ತಾರೆ. ಮದುವೆ ಮಾಡಿಕೊಂಡು ಅವರು ಬಾಳಬೇಕಾದ್ದರಿಂದ ತಮ್ಮ ಅಭಿರುಚಿಗೆ ತಕ್ಕಂತೆ ಹುಡುಕಿಕೊಳ್ಳುತ್ತಾರೆ ಎಂದು ನನಗೂ ಅದು ಸರಿ ಎನಿಸಿದೆ. ನೀನು ಚೆನ್ನಾಗಿ ಬಟ್ಟೆಬರೆ ಹಾಕಿಕೊಂಡು, ನಾನು ಕೊಡುವ ತಿಂಡಿ ಗಂಟನ್ನು ತೆಗೆದುಕೊಂಡು ನಿನ್ನ ಪ್ರಿಯ ಮೂಷಕ ವಾಹನವನ್ನೇರಿ ಹೊಸ ಜಾಗ, ಜನ ಪ್ರಪಂಚ ನೋಡುವ ನೆಪದಲ್ಲಿ ಯಾರಾದರೂ ನಿನಗೆ ಇಷ್ಟವಾದ ಕನ್ಯಾಮಣಿ ದೊರಕಿದರೆ ಮಾತನಾಡು. ನಿನಗೂ ಅವಳಿಗೂ ಒಪ್ಪಿಗೆಯಾದರೆ ಕರೆದುಕೊಂಡು ಬಾ. ಮುಂದಿನ ಕೆಲಸ ನಾವು ನೋಡಿ ವಿಚಾರಿಸಿ, ವಿಜೃಂಭಣೆಯಿಂದ ನಿನ್ನ ಮದುವೆ ಮಾಡುತ್ತೇವೆ” ಎಂದಳು.

ತಾಯಿಗೆ ತನ್ನ ಮಗ ಗಣೇಶ ಅವಳು ಹೇಳಿದಂತೆ ಕೇಳಿ ಅವಳ ಆಶೀರ್ವಾದ ಪಡೆದು ತಿಂಡಿಗಂಟಿನೊಡನೆ ವಾಹನವೇರಿ ಹೊರಟ ಪಾರ್ವತಿ ಬಹಳ ಸಂಭ್ರಮದಿಂದ ಅವನಿಗೆ ಆಶೀರ್ವಾದ ಮಾಡಿ ದೃಷ್ಟಿ ತೆಗೆದು ಕಳುಹಿಸಿಕೊಟ್ಟಳು.

ಗಣಪ ನಿಧಾನವಾಗಿ ವಾಹನ ನಡೆಸುತ್ತಾ ಆ ಕಡೆ ಈ ಕಡೆ ನೋಡುತ್ತಾ ಎಲ್ಲಿ ಹುಡುಗಿಯರು ಕಂಡರೂ ಅಲ್ಲಿ ವಾಹನ ನಿಲ್ಲಿಸಿ ಆಸೆಯಿಂದ ಬೆರಗಾಗಿ ನೋಡುತ್ತಾ ನಿಂತು ಬಿಡುತ್ತಿದ್ದ. ಅನೇಕ ಯುವತಿಯರು ಇವನ ವಿಚಿತ್ರವಾದ ವೇಷವನ್ನು ನೋಡಿ ಕುತೂಹಲದಿಂದ ನಿಂತರೆ ಈ ಗಣಪ ನಾಚಿಕೆಯಿಂದ “ನನ್ನ ಮದುವೆ ಆಗುತ್ತೀರಾ” ಎಂದು ಕೇಳುತ್ತಿದ್ದ. ಎಲ್ಲರೂ ಒಂದಲ್ಲ ಒಂದು ನೆಪ ಹೇಳಿ ಭರಭರನೆ ಆ ಜಾಗಬಿಟ್ಟು ಹೋಗಿ ಬಿಡುತ್ತಿದ್ದರು. ಯಾಕೆಂದರೆ ಅವರಿಗೆ ಮದುವೆ ಸಂಸಾರವೆಂದರೆ ಅರಿವಿಲ್ಲ. ಅಡಿಗೆ ಪಡಿಗೆ ಮಾಡಲು ಬರುತ್ತಿರಲಿಲ್ಲ. ತಮ್ಮ ಸೌಂದರ್ಯ ಕಾಪಾಡಿಕೊಂಡು ಹೆಚ್ಚು ತಿನ್ನುವ ಮಾತೇ ಇಲ್ಲದೆ, ಸ್ವತಂತ್ರ, ಸ್ವೇಚ್ಛೆಯಿಂದ ಇರುವುದನ್ನು ರೂಢಿ ಮಾಡಿಕೊಂಡಿದ್ದರು.

ಗಣಪನಿಗೆ ಇದೆಲ್ಲಾ ಏನೂ ಅರಿವಿಲ್ಲ. ‘ವೈ’ತ್ವವಾಗಲೀ ಆರು-ಎಂಟು ಶರೀರ ಕಟ್ಟು-ಮಾಂಸ ಖಂಡಗಳಾಗಲೀ ಇರಲಿಲ್ಲ. ಪೂರ್ತಿ ಶರೀರ ವಿಚಿತ್ರವಾಗಿ ಬೇರೆಯವರಿಗೆ ಕಾಣುತ್ತಿತ್ತು.

ಪಾಪ ಸುತ್ತಿ ಸುತ್ತಿ ಬಳಲಿ ನಿರಾಶನಾಗಿ ಗಣೇಶ ಅಲ್ಲೇ ಇದ್ದ ಬಂಡೇ ಮೇಲೆ ಕುಳಿತು ಚಿಂತಾಕ್ರಾಂತನಾಗಿ, ದುಃಖದಿಂದ ಅವನತ ಮುಖಿಯಾಗಿ ಕುಳಿತು ಬಿಟ್ಟ. ಸ್ವಲ್ಪ ಸಮಯದ ನಂತರ ಇಬ್ಬರು ಯುವತಿಯರು ಮ್ಲಾನ ವದನನಾದ ಇವನನ್ನು ನೋಡಿ ಅಂತಃಕರಣದಿಂದ “ನೀನ್ಯಾರು ಎಲ್ಲಿಂದ ಬಂದಿದ್ದೀ ಯಾಕೆ ದುಃಖ ಪಡುತ್ತಿದ್ದೀ” ಎಂದು ವಿಚಾರಿಸಿದರು. ಇವನು ತನ್ನ ದುಃಖ ಹೇಳಿಕೊಂಡ. ಇವನ ಕಥೆ ಕೇಳಿ ಆಶ್ಚರ್ಯ ಕರುಣೆಯಿಂದ ಪ್ರಪಂಚಕ್ಕೆ ತಂದೆ ತಾಯಿಯಾಗಿರುವ, ಅರ್ಧನಾರೀಶ್ವರರೆಂದೇ ಹೆಸರಿರುವ ಇವನ ಪೂಜ್ಯ ಮಾತಾಪಿತೃಗಳು, ಇಂತಹವರ ಮಗನ ಈ ಕಷ್ಟವನ್ನು ದೂರ ಮಾಡಲಾದರೆ, ಸಹಾಯ ಮಾಡೋಣ ಎಂದು ನಿಶ್ಚಯಿಸಿ “ನೋಡು ಗಣೇಶ, ನಮಗೆ ಮದುವೆ-ಗಿದುವೇಲಿ ನಂಬಿಕೆ ಇಲ್ಲ ನನ್ನ ಹೆಸರು ಸಿದ್ಧಿ ಇವಳ ಹೆಸರು ಬುದ್ಧಿ, ನಾವು ಸಮಾಜ ಸೇವೆಯಲ್ಲಿ ತೊಡಗಿದ್ದೇವೆ. ನಾವಿಬ್ಬರೂ ಬೇಕಾದರೆ ನಿನ್ನ ಜೊತೆಯಲ್ಲೇ ಒಂದೇ ಮೇಲ್ಛಾವಣಿ ಅಡಿಯಲ್ಲಿ ಯಾವುದೇ ಕಟ್ಟು ಬಂಧನದ ಸೀಮಿತ ದಾಟದೆ ಸೌಹಾರ್ಧತೆಯಿಂದ ಬಾಳುವ ಮನೋಭಾವವಿದ್ದರೆ ಕೂಡಿ ಬಾಳಬಹುದು. ನಿನಗೆ ಇಷ್ಟವಾದರೆ ಆ “ಸ್ವತಂತ್ರ” ಇದ್ದರೆ ನಾವಿಬ್ಬರೂ ನಿನ್ನೊಡನೆ ಬಾಳಲು ಸಿದ್ಧ” ಎಂದರು.

ಸುಸ್ತಾಗಿದ್ದ ಈ ನಮ್ಮ ವಕ್ರತುಂಡ ಮಹಾಕಾಯ ಈ ಮಾತು ಕೇಳಿ ಕಾಲಕ್ಕೆ ತಕ್ಕಂತೆ ಇರಬೇಕು. ಎಂದು ಸಮಾಧಾನ ಸಂತೋಷದಿಂದ ಸೂರ್ಯಕೋಟಿ ಪ್ರಭೆ ಬೀರುತ್ತಾ ಸಮಾಜ ರಕ್ಷಣೆ, ನಿರ್ವಿಘ್ನವಾಗಿ ಕೆಲಸವಾಗಲು ಸಿದ್ಧಿಬುದ್ಧಿಯರ ಸಹಕಾರ ಅವಶ್ಯಕ ಎಂದು ನಿರ್ಧರಿಸಿ ಅವರೊಡನೆ ತನ್ನ ಮನೆಗೆ ಹಿಂದಿರುಗಿದ. ಬಂದವನೇ ತಾಯಿಯನ್ನು ಒಪ್ಪಿಸಿ ಇಂದಿನವರೆಗೂ ಸುಖವಾಗಿ ಹಾಯಾಗಿ ಪ್ರಥಮ ಪೂಜಾ ವಂದಿತನಾಗಿ ತಿಂದುಂಡುಕೊಂಡು ಎಲ್ಲರ ಕ್ಷೇಮವನ್ನು ಕಾಪಾಡುತ್ತಿದ್ದಾನೆ.

ನಾವೆಲ್ಲ ಗಣೇಶನನ್ನು ಪ್ರಾರ್ಥಿಸಿದರೆ ಸಾಕು ಸಿದ್ಧಿ, ಬುದ್ಧಿಯ ಸಹಾಯದಿಂದ ಕಾರ್ಯ ಸುಸೂತ್ರವಾಗಿ ಸಿದ್ಧಿಸುತ್ತೆ ಶರಣು ಶರಣು ಗಣೇಶ. ಜಯ ಮಂಗಳ. ಅ

*ಡಾ. ಅಹಲ್ಯಾ ಚಿಂತಾಮಣಿ*

# ಕನ್ನಡ ಭಾಷೆಯನ್ನು ಬೆಳೆಸುವುದು ಹೇಗೆ? - ಒಂದು ಚಿಂತನೆ

ಯಾವುದೇ ಒಂದು ಭಾಷೆ ಬೆಳೆಯಬೇಕಾದರೆ ಅದು ಹೆಚ್ಚು ಹೆಚ್ಚು ಬಳಕೆಯಾಗಬೇಕು, ಚಲಾವಣೆಯಲ್ಲಿ ಇರಬೇಕು. ಅಂದರೆ ಹೆಚ್ಚು ಹೆಚ್ಚು ಮಂದಿ ಆ ಭಾಷೆಯನ್ನು ತಮ್ಮ ದಿನನಿತ್ಯದ ಬದುಕಿನಲ್ಲಿ ಒಂದಲ್ಲೊಂದು ರೂಪದಲ್ಲಿ ಬಳಸುತ್ತಾ ಹೋಗಬೇಕು. ಮುಖ್ಯವಾಗಿ ಮಾತನಾಡಲು, ಬರೆಯಲು, ಓದಲು, ಸಂಗೀತ, ನಾಟಕ ಇತ್ಯಾದಿ ಕಲೆಗಳ ಮೂಲಕ ಆಲಿಸಲು, ಸಿನಿಮಾ, ರೇಡಿಯೋ, ಟಿ.ವಿ., ಪತ್ರಿಕೆಗಳು ಹಾಗೂ ಇಂದಿನ ಅತ್ಯಂತ ಪ್ರಭಾವಶಾಲಿಯಾದ ಅಂತರ್ಜಾಲ, ಜಂಗಮವಾಣಿ ಮತ್ತಿತರ ಸಾಮಾಜಿಕ ಮಾಧ್ಯಮಗಳಲ್ಲಿ ಒಂದು ಭಾಷೆ ಯಶಸ್ವಿಯಾಗಿ ಬಳಕೆಯಾದಾಗ ಅಂತಹ ಭಾಷೆ ಬೆಳೆಯುತ್ತಲೇ ಹೋಗುತ್ತದೆ.

ಈ ಹಿನ್ನೆಲೆಯಲ್ಲಿ ನಾವು ಕನ್ನಡ ಭಾಷೆಯನ್ನು ನೋಡಿದಾಗ ಯಾಕೋ ನಮಗೆ ದಿಗಿಲಾಗುತ್ತದೆ. ಬದಲಾಗುತ್ತಿರುವ ಪರಿಸ್ಥಿತಿಗೆ ಕನ್ನಡ ಭಾಷೆಗೆ ಅಷ್ಟು ಬಿರುಸಿನಿಂದ ಹೊಂದಿಕೊಳ್ಳಲಾಗುತ್ತಿಲ್ಲ ಎನ್ನಿಸುತ್ತಿದೆ. ನಮ್ಮ ಎಲ್ಲಾ ಮನೆ-ಮನಗಳಲ್ಲಿ ಹಿಂದಿ, ಇಂಗ್ಲಿಷ್ ಅತ್ಯಂತ ಭರದಿಂದ ನುಗ್ಗಿ ಬಿಡುತ್ತಿದೆ. ಶಾಲೆ-ಕಾಲೇಜುಗಳಲ್ಲಿ ಕನ್ನಡ ಹಿಂದೆ ಸರಿಯುತ್ತಿದೆ. ಮಾತನಾಡುವ ಭಾಷೆಯಲ್ಲಿ ಕನ್ನಡ ಕ್ಷೀಣಿಸುತ್ತಿದೆ. ಇಂಗ್ಲಿಷ್ ಅಥವಾ ಇನ್ನಿತರ ಭಾಷೆಗಳಿಗೆ ನಾವು ಬೇಗ ಬಲಿ ಬೀಳುತ್ತಿದ್ದೇವೆ. ಕನ್ನಡ ಮಾಧ್ಯಮ ಶಾಲೆಗಳ ಸಂಖ್ಯೆ, ಅವುಗಳ ಗುಣಮಟ್ಟ, ಕನ್ನಡ ಸಿನೇಮಾಗಳು, ಟಿ.ವಿ. ದಾರಾವಾಹಿಗಳು ಅವುಗಳ ಗುಣಮಟ್ಟ ಮತ್ತು ಅವುಗಳನ್ನು ನೋಡುವವರ ಸಂಖ್ಯೆ ಕೂಡಾ ದಿನದಿಂದ ದಿನಕ್ಕೆ ಕೆಳಮುಖವಾದಂತೆ ಅನ್ನಿಸುತ್ತಿದೆ. ಓದುವ, ಬರೆಯುವ, ಭಾಷೆ-ಇಂಗ್ಲಿಷ್ ಆಗುತ್ತಿದೆ. ಇದು ಏಕೆ ಹೀಗೆ? ನಮಗೆ ಕನ್ನಡದ ಮೇಲೆ ಪ್ರೀತಿ ಇಲ್ಲವೇ ಅಥವಾ ನಮ್ಮ ಇಂಗ್ಲಿಷ್ ವ್ಯಾಮೋಹ ಅತಿ ಆಗುತ್ತಿದೆಯೇ?

ಕನ್ನಡದಲ್ಲಿ ಕಲಿತವರಿಗೆ ಕೆಲಸ ಸಿಗುವುದಿಲ್ಲ. ಇಂಗ್ಲಿಷ್ ಮಾತ್ರದಿಂದಲೇ ನಾವು ಹೆಚ್ಚು ತಿಳಿದುಕೊಂಡು ದೊಡ್ಡ ದೊಡ್ಡ ಕೆಲಸ ಪಡೆದು ಜಾಸ್ತಿ ಹಣ ಗಳಿಸಬಹುದಾಗಿದೆ ಎಂಬ ನಂಬಿಕೆಯೇ, ಭ್ರಮೆಯೇ? ಏಕೆ ಹೀಗಾಗುತ್ತಿದೆ. ನಮ್ಮ ಮಾತ್ರ ಭಾಷೆ ನಮಗೇಕೆ ಬೇಡವೆನಿಸುತ್ತಿದೆ. ಇಂಗ್ಲಿಷ್‌ನಲ್ಲಿ ಮಾತನಾಡುವುದೇ ಒಂದು ಸ್ಟೈಲೇ, ಜಂಭವೇ, ಅಹಂಕಾರವೇ? ನಮ್ಮ ಹುಟ್ಟಿದ ಪುಟ್ಟ ಪುಟ್ಟ ಮಕ್ಕಳಿಗೆ ಕನ್ನಡ ಕಲಿಸದೆ ನೇರವಾಗಿ ಅತಿ ಚಿಕ್ಕವಯಸ್ಸಿನಿಂದ ಇಂಗ್ಲಿಷ್ ಮಾಧ್ಯಮದಲ್ಲಿ ಓದಿಸಿ ಅವರನ್ನು ಮಾತೃ ಭಾಷೆಯಿಂದ ವಂಚಿಸುವುದು ಯಾವ ಧರ್ಮ? ಹೆತ್ತ ಮಗುವಿಗೆ ತಾಯಿ ಹಾಲನ್ನು ಉಣಿಸದ ತಾಯಿ ತನ್ನ ಸೌಂದರ್ಯ ಹಾಳಾಗದಂತೆ ಕಾಪಾಡಿಕೊಳ್ಳುವುದಾದರೆ, ಆ ಮಕ್ಕಳ ಗತಿಯೇನು? ಮಾತೃ ಭಾಷೆಯಿಂದ ವಂಚಿತರಾದ ಆ ಮಕ್ಕಳು ಪರ ಭಾಷೆಗಳಿಂದ ಎಷ್ಟೇ ಕಲಿತರೂ, ಓದಿದರೂ ತಾಯಿ ಹಾಲಿನಿಂದ ವಂಚಿಸಲ್ಪಟ್ಟವರಂತೆಯೇ ಸರಿ. ಎಂದೆಂದಿಗೂ ಅವರು ಪರಿಪೂರ್ಣ, ಸಶಕ್ತ, ಆರೋಗ್ಯವಂತರಾಗಲು ಸಾಧ್ಯವೇ ಇಲ್ಲ. ಚಿಕ್ಕಂದಿನಲ್ಲಿ ಮೊದಲ ಆರು ತಿಂಗಳು "ತಾಯಿಯ ಹಾಲಿನ ಹೊರತಾಗಿ ಬೇರೇನನ್ನೂ ಕೊಡಬೇಡಿ" ಎಂದು ಸರ್ಕಾರ ಕಡ್ಡಾಯ ಮಾಡುತ್ತಿರುವಾಗ, ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ಮಾತೃಭಾಷೆಯಲ್ಲಿ ಮಾಡದಿರುವುದೇಕೆ? ನಮ್ಮ ಮುಂದಿನ ಜನಾಂಗಕ್ಕೆ ಮಾತೃ ಭಾಷೆಯ ಸೊಗಡೇ ಇಲ್ಲವಾದರೆ ಅವರನ್ನು ತಾಯ್ನಾಡಿನ "ಮುದ್ದಿನ ಕರು"ಗಳನ್ನಾಗಿ ಮಾಡುವುದು ಹೇಗೆ. ತಾಯಿಯ ಭಕ್ತಿಯೇ ಇಲ್ಲದವರು ಬೆಳೆದು ಮುಂದೆ ದೇಶ ಭಕ್ತರಾಗಬಹುದೇ?

ನಮ್ಮ ನೆರೆಹೊರೆ, ಬಡಾವಣೆಗಳಲ್ಲಿ, ಸಿನೆಮಾ ಹಾಲ್‌ಗಳಲ್ಲಿ, ಮಂದಿರ, ಚರ್ಚು, ಮಸೀದಿಗಳಲ್ಲಿ, ಹಬ್ಬ ಹರಿದಿನಗಳನ್ನು ಆಚರಿಸಿ ಆನಂದಿಸುವಾಗ ನಮಗೆ ನಮ್ಮ ಭಾಷೆಯ ಹೊರತಾಗಿ ಅನ್ಯ ಭಾಷೆಯೊಂದರಲ್ಲಿ ಹಾಡಿ ಕುಣಿಯುವ ಅಭಿಲಾಷೆ ಏಕೆ. ಸುಮಾರು 2000 ವರ್ಷಗಳ ಇತಿಹಾಸ, ಭಾರತದ ಇತರ ಎಲ್ಲಾ ಭಾಷೆಗಳಿಗೆ ಹೋಲಿಸಿದಾಗ ಈಗಾಗಲೆ ಅತೀ ಹೆಚ್ಚು (ಎಂಟು) ಭಾರತೀಯ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದಿರುವ ಒಂದು ಭವ್ಯ ಪರಂಪರೆಯ ಶ್ರೀಮಂತ ಭಾಷೆಯನ್ನು ಹೀಗೆ ನಾವೆಲ್ಲರೂ ನಿರಂತರವಾಗಿ ಅಸಡ್ಡೆ ಮಾಡುತ್ತಾ ಬಂದರೆ ಈ ಭಾಷೆ ಉಳಿಯುವುದು ಬೆಳೆಯುವುದು ಹೇಗೆ ಸಾಧ್ಯ.


ಹಿಂದೆ ಅಂದರೆ ಸುಮಾರು 10-20 ವರ್ಷಗಳ ಹಿಂದಿನ ತನಕ ನಾವೆಲ್ಲರೂ ಕನ್ನಡ ಮಾಧ್ಯಮದಲ್ಲೇ ಓದಿ ಬರೆದೆವು. ಕನ್ನಡ ಭಾಷೆಯ ಮೂಲಕವೇ ಜಗತ್ತನ್ನು ಅರ್ಥ ಮಾಡಿಕೊಂಡೆವು. ಮುಂದೆ ಇಂಗ್ಲಿಷ್, ಹಿಂದಿ ಮತ್ತಿತರ ಭಾಷೆಗಳನ್ನು ಕಲಿತೆವು. ಒಳ್ಳೆಯ ಸಾಧನೆ ಮಾಡಿದೆವು, ಉದ್ಯೋಗವನ್ನು ಪಡೆದೆವು, ದೊಡ್ಡ ದೊಡ್ಡ ಸ್ಥಾನ-ಮಾನಗಳನ್ನು ಸಂಪಾದಿಸಿದೆವು. ಆದರೆ ಇದ್ದಕ್ಕಿದ್ದಂತೆ ಅದೇಕೆ ಈಗ ಹೀಗಾಗುತ್ತಿದೆ. ಕನ್ನಡ ಕಲಿತರೆ, ಕನ್ನಡದಲ್ಲಿ ಮಾತನಾಡಿದರೆ ನಾವು ಜೀವನದಲ್ಲಿ ಮುಂದೆ ಬರಲು ಸಾಧ್ಯವಾಗದು ಎಂಬಂತ ಈ ಭ್ರಮೆ ಹೇಗೆ ಇಡೀ ಕರ್ನಾಟಕವನ್ನೇ ಆವರಿಸುತ್ತಿದೆ. ಇದನ್ನು ತಡೆಯುವುದು ಹೇಗೆ. ನಮ್ಮ ಕನ್ನಡ ಭಾಷೆಯ-ಸಂಸ್ಕೃತಿಯ ಅಪಾರ ಜ್ಞಾನ ಸಂಪತ್ತನ್ನು ಮುಂದಿನ ಪೀಳಿಗೆಗೆ ನೀಡುವುದು ಹೇಗೆ?

ಕರ್ನಾಟಕದಂತಹ ಒಂದು ದೊಡ್ಡ ರಾಜ್ಯ, 30 ಜಿಲ್ಲೆಗಳನ್ನೊಳಗೊಂಡು, ಸಾಕಷ್ಟು ಪ್ರಾಕೃತಿಕ ಸಿರಿ-ಸಂಪತ್ತನ್ನು ಹೊಂದಿದ್ದು, ಇಂದೇಕೆ ಬಡವಾದಂತೆ ಕಾಣುತ್ತಿದೆ. ಮಾತೃ ಭಾಷೆ ಎಲ್ಲೋ ಮಾಸಿ ಹೋಗುತ್ತಿದ್ದು ಎಲ್ಲೆಡೆ ಕೇವಲ ಬೆರಳೆಣಿಕೆಯ ಕೆಲವು ಮಂದಿಗಳು ಇಂಗ್ಲಿಷ್ ಭಾಷೆಯನ್ನು ಕನ್ನಡದ ಮೇಲೆ ಹೇರಿ ನಮ್ಮನ್ನು ತುಳಿಯುತ್ತಿದ್ದಾರೆಯೇ ಅನ್ನಿಸುತ್ತಿದೆ. ಕನ್ನಡ ಜಾನಪದ, ಭಜನೆ, ಹೂವಿನಕೋಲು, ಹರಿಕಥೆ, ತಾಳಮದ್ದಲೆ, ಯಕ್ಷಗಾನ, ದೊಡ್ಡಾಟ, ಚಿಕ್ಕಾಟ, ನಾಟಕ, ಸಂಗೀತ ಎಲ್ಲವೂ ಕ್ಷೀಣಿಸುತ್ತಾ ಆಧುನಿಕ ಪಾಶ್ಚಾತ್ಯ ಸಂಸ್ಕೃತಿಯ ಅರ್ಥಹೀನ ಹಾಡು-ಕುಣಿತ, ಕಲೆಗಳನ್ನು ನಾವು ಮೆಚ್ಚುವುದಾದರೂ ಏಕೆ. ಮರಕೋತಿಗಳಂತೆ ಅರ್ಥವಾಗದ ಅನ್ಯ ಸಂಸ್ಕೃತಿಯನ್ನು ನಕಲು ಮಾಡುತ್ತಿರುವುದು ಏಕೆ? ನಮ್ಮ ಇಂದಿನ ನವಜನಾಂಗ ಮತ್ತು ಮುಂದಿನ ಪೀಳಿಗೆಗೆ ನಾವು ಅಂದರೆ ಇಂದು ಜವಾಬ್ದಾರಿಯಲ್ಲಿರುವ ಎಲ್ಲರೂ, ಹೆತ್ತವರು, ಗುರುಗಳು, ಯುವಕರು, ಮಹಿಳೆಯರು, ಸರ್ಕಾರ, ಅಧಿಕಾರಿಗಳು, ಸಚಿವರು, ಶಾಸಕರು, ಸಂಸದರು, ಕೈಗಾರಿಕೆಗಳ ಮುಖಂಡರು-ಹೀಗೆ ಪ್ರತಿಯೊಬ್ಬರು ತಾಯ್ನುಡಿಯನ್ನು ಬೆಳೆಸುವ ಜವಾಬ್ದಾರಿಯನ್ನು ಹೊರಬೇಕು. ಕನ್ನಡ ಭಾಷೆ ಅಕ್ಷರಶಃ ನಮ್ಮ ಉಸಿರಾಗಬೇಕು.

ದಿನನಿತ್ಯದ ನಮ್ಮ ಚಟುವಟಿಕೆಗಳಲ್ಲಿ ಕನ್ನಡವನ್ನು ತಪ್ಪದೆ ಬಳಸಬೇಕು ಬೆಳೆಸಬೇಕು. ರಾಜ್ಯದಾದ್ಯಂತ ಸಂಪೂರ್ಣ ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಿ ಕನ್ನಡದಲ್ಲೇ ನಡೆಯಬೇಕು. ಕರ್ನಾಟಕದಲ್ಲಿ ಜನಿಸಿವು ಪ್ರತಿಯೊಂದೂ ಮಗುವು ಕನ್ನಡ ಭಾಷೆಯಲ್ಲೇ ತನ್ನ ಪ್ರಾರಂಭಿಕ ಜೀವನವನ್ನು ಆನಂದಿಸುವಂತಾಗಬೇಕು. ನಾವು ಕನ್ನಡದಲ್ಲಿ ವ್ಯವಹರಿಸುವವರನ್ನು ಪ್ರೋತ್ಸಾಹಿಸಿ ಹುರಿದುಂಬಿಸಬೇಕು. ಕನ್ನಡದ ಹೊರತಾಗಿ ಬೇರೆ ಭಾಷೆ ಅನಿವಾರ್ಯವಾದಾಗಲಷ್ಟೇ ಬಳಸಬೇಕು. ಮಕ್ಕಳ ಹಾಗೂ ಇಂದಿನ ಯುವ ಪೀಳಿಗೆಯ ಅಭಿರುಚಿಗೆ ತಕ್ಕಂತೆ ಕನ್ನಡ ಭಾಷೆಯನ್ನು ಅತ್ಯಂತ ಆಕರ್ಷಕವಾಗಿ ಬೆಳೆಸಿ ಅದನ್ನೇ ಬಳಸುವಂತೆ ಮಾಡಬೇಕು. ಎಲ್ಲಾ ಚಟುವಟಿಕೆಗಳಲ್ಲಿ ಕನ್ನಡದಲ್ಲಿ ಮೊಬೈಲ್ ಆಪ್‌ಗಳನ್ನು ಅಭಿವೃದ್ಧಿಪಡಿಸಿ ಬಳಸಬೇಕು. ರೇಡಿಯೋ, ಟಿ.ವಿ. ಸಿನಿಮಾಗಳಲ್ಲಿ ಕನ್ನಡೇತರ ಕಾರ್ಯಕ್ರಮಗಳ ಸಮಯವನ್ನು ಸೀಮಿತಗೊಳಿಸಿ ನಿಗದಿ ಪಡಿಸಬೇಕು. ಉಳಿದಂತೆ ಮಿಕ್ಕೆಲ್ಲಾ ಕಾರ್ಯಕ್ರಮಗಳು ಕನ್ನಡದಲ್ಲೇ ಉತ್ತಮ ಗುಣಮಟ್ಟದಲ್ಲಿ ಸಿದ್ಧಪಡಿಸಿ ಪಸರಿಸಬೇಕು. ಎಲ್ಲಾ ಕಾರ್ಯಕ್ರಮಗಳು ಕನ್ನಡದಲ್ಲೇ ನಡೆದು ಅತೀ ಅಗತ್ಯವಿದ್ದಲ್ಲಿ ಅದರ ಇಂಗ್ಲಿಷ್ ಭಾಷಾಂತರ ಏರ್ಪಡಿಸಬಹುದು.

ಕನ್ನಡದ ಹಾಡು, ಸಂಗೀತ, ಸಂಸ್ಕೃತಿಯನ್ನು ವಿವಿಧ ಮಾಧ್ಯಮಗಳ ಮೂಲಕ ಆಕರ್ಷಕವಾಗಿ ಪ್ರಚಾರಪಡಿಸಿ ಹೆಚ್ಚು ಜನಪ್ರಿಯ ಆಗುವಂತಾಗಬೇಕು. ಕಳೆದು ಹೋಗುತ್ತಿರುವ ಕನ್ನಡದ ಬಗೆಗಿನ ಆಸಕ್ತಿಯನ್ನು ಮತ್ತೆ ಬೆಳೆಯುವಂತೆ ಮಾಡಿ ಕರ್ನಾಟಕದ ಜನ ಕನ್ನಡವನ್ನೇ ತಮ್ಮ ಆದ್ಯತೆಯನ್ನಾಗಿ ಮಾಡಿಕೊಂಡು ತಮ್ಮೆಲ್ಲಾ ವ್ಯವಹಾರಗಳನ್ನು ಕನ್ನಡ ಭಾಷೆಯಲ್ಲೇ ನಡೆಸಿದರೆ ಕನ್ನಡ ಮತ್ತೆ ಬೆಳೆದೀತು ರಾಜ್ಯದಲ್ಲಷ್ಟೇ ಅಲ್ಲದೆ ದೇಶ ಹಾಗೂ ವಿಶ್ವದಲ್ಲಿ ತನ್ನ ಕಂಪನ್ನು ಬೀರೀತು ಎಂಬ ಆಶಯದೊಂದಿಗೆ ಕನ್ನಡ ಭಾಷೆಯ ಬೆಳವಣಿಗೆಗೆ ನಾವೆಲ್ಲಾ ಇಂದಿನಿಂದಲೇ ಮತ್ತೊಮ್ಮೆ ಕಂಕಣಬದ್ಧರಾಗೋಣ. ಕನ್ನಡ ಬೆಳೆದು ಕರ್ನಾಟಕದಾದ್ಯಂತ ಮನಮನೆಗಳಲ್ಲಿ ರಾರಾಜಿಸುವ ತನಕ ನಮ್ಮ ಈ ಬದ್ಧತೆಯಲ್ಲಿ ಎಂದೂ ರಾಜಿ ಮಾಡಿಕೊಳ್ಳದಿರೋಣ. ಪ್ರಪಂಚದಾದ್ಯಂತ ಈಗಾಗಲೇ ನೂರಾರು ಸಣ್ಣ ಮತ್ತು ದೊಡ್ಡ ಭಾಷೆಗಳು ನಾನಾ ಕಾರಣಗಳಿಂದ ನಶಿಸಿಹೋದ ಪುರಾವೆಗಳಿವೆ. ಕನ್ನಡ ಭಾಷೆಯನ್ನು ಕರ್ನಾಟಕದ ಮೂಲ ಜನರಾದ ನಾವು ಕನ್ನಡಿಗರೇ ಆಡದಿದ್ದರೆ, ಓದದಿದ್ದರೆ, ಬರೆಯದಿದ್ದರೆ, ಹಾಡದಿದ್ದರೆ, ನಾಟಕವಾಡಿ ಆನಂದಿಸದಿದ್ದರೆ, ಸಂಗೀತ ಕೇಳಿ ಆಲಿಸದಿದ್ದರೆ, ನಮ್ಮ ಈ ಪುರಾತನ ಶಾಸ್ತ್ರೀಯ ಸುಂದರ ಸಮೃದ್ಧ ಭಾಷೆ ನಶಿಸಿ ಹೋಗಲು ಬಹಳ ದಿನಗಳೇನೂ ಬೇಕಾಗಿಲ್ಲ. ಈ ಗಂಭೀರ ಪರಿಸ್ಥಿತಿಯಿಂದ ಪಾರಾಗಲು, ನಮ್ಮ ಮಕ್ಕಳು-ಮುಂದಿನ ಜನಾಂಗ ಕನ್ನಡದ ಪ್ರತಿ ಒಲವು ತೋರಿಸಿ ಕನ್ನಡದಲ್ಲಿ ವ್ಯವಹರಿಸಿ, ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವಂತೆ ಪ್ರೇರೇಪಿಸಿ, ಪ್ರೋತ್ಸಾಹಿಸಿ ಹುರಿದುಂಬಿಸುವ ಕೆಲಸ ಇಂದು ಕನ್ನಡಿಗರಾದ ನಮ್ಮೆಲ್ಲರ ಆದ್ಯ ಕರ್ತವ್ಯವಾಗಬೇಕಾಗಿದೆ.

*ಸಖಾರಾಮ ಉಪ್ಪೂರು*
*(ಲೇಖನವು ಲೇಖಕರ ವೈಯಕ್ತಿಕ ಅಭಿಪ್ರಾಯಗಳಾಗಿವೆ)*



# ಅವನೀಂದ್ರನಾಥ್ ರಾವ್ ಅವರ 'ಭೂಮಿಗಾನ ಆಕಾಶಯಾನ' ಕೃತಿ ಬಿಡುಗಡೆ

ಘನ ವಿಚಾರಗಳನ್ನು ಸರಳ ಭಾಷೆಯಲ್ಲಿ ಹೇಳುವ ಕಲೆಯಿಂದಾಗಿ ರೇಡಿಯೋ ಕೆಲವು ವಿಶಿಷ್ಟ ಬರಹಗಾರರನ್ನು ನೀಡಿದೆ ಎಂಬುದಾಗಿ ಹಿರಿಯ ಕಲಾ ವಿಮರ್ಶಕ, ಪತ್ರಕರ್ತ ಎ. ಈಶ್ವರಯ್ಯ ಅಭಿಪ್ರಾಯಪಟ್ಟರು.

ಅವರು ಉಡುಪಿಯಲ್ಲಿ ಇದೇ ಡಿಸೆಂಬರ್ 22ರಂದು ದೆಹಲಿಯ ಲೇಖಕ ಡಾ. ಅವನೀಂದ್ರನಾಥ್ ರಾವ್ ಅವರ 'ಭೂಮಿಗಾನ ಆಕಾಶಯಾನ' ರೇಡಿಯೋ ಬರಹಗಳ ಕೃತಿ ಬಿಡುಗಡೆ ಸಮಾರಂಭದಲ್ಲಿ ಮಾತನಾಡುತ್ತಿದ್ದರು. ಕಾಲ ಮಿತಿ ಹಾಗೂ ಅಂಕಣ ಮಿತಿಗಳು ಲೇಖಕರಿಗೆ ರೇಡಿಯೋ ಸೇರಿದಂತೆ ಸಮೂಹ ಮಾಧ್ಯಮಗಳಿಂದ ಕಾಲ ಕಾಲಕ್ಕೆ ಒದಗಿದ ಸವಾಲುಗಳು ಎಂದು ವಿವರಿಸಿದರು.

ಹಿರಿಯ ವಿಮರ್ಶಕ ಪ್ರೊ. ಮುರಳೀಧರ ಉಪಾಧ್ಯ ಹಿರಿಯಡ್ಕ ಅವರು ಆಕಾಶವಾಣಿ ಕೇಳುಗರ ಪತ್ರವನ್ನು ಉಲ್ಲೇಖಿಸಿ ಅವನೀಂದ್ರರ ಕೃತಿ ವಿನೂತನ ಬಗೆಯದು ಎಂಬ ಅನಿಸಿಕೆ ವ್ಯಕ್ತಪಡಿಸಿದರು.

ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ನಿರ್ದೇಶಕ ಪ್ರೊ. ಹೇರಂಜೆ ಕೃಷ್ಣ ಭಟ್ ಕೃತಿ ಬಿಡುಗಡೆಗೊಳಿಸಿ ಶುಭ ಹಾರೈಸಿದರು.

ಅವನೀಂದ್ರನಾಥ್ ರಾವ್ ಅವರು ತಾವು ಮಂಗಳೂರು ಆಕಾಶವಾಣಿಯಲ್ಲಿ ನಿರೂಪಕರಾಗಿದ್ದ ದಿನಗಳನ್ನು ಸ್ಮರಿಸಿಕೊಂಡರು.

ಹಿರಿಯ ವಿದ್ವಾಂಸ ಡಾ. ಪಾದೆಕಲ್ಲು ವಿಷ್ಣು ಭಟ್, ಪ್ರೊ. ರಾಘವ ನಂಬಿಯಾರ್, ಡಾ. ಉಪ್ಪಂಗಳ ರಾಮಭಟ್, ಡಾ. ವೈ. ರವೀಂದ್ರನಾಥ್ ರಾವ್, ಭುವನೇಂದ್ರ ರಾವ್, ಜಿ.ಕೆ. ಮಧ್ಯಸ್ಥ ಮೊದಲಾದವರು ಉಪಸ್ಥಿತರಿದ್ದರು.

ಈ ಕೃತಿಯನ್ನು ಬೆಂಗಳೂರಿನ 'ನಿವೇದಿತ ಪ್ರಕಾಶನ' ಪ್ರಕಟಿಸಿದೆ. ಅ

*ಅಭಿಮತ ವರದಿ*

ಅಭಿನಂದನೆ

# ಕೆ.ವಿ.ತಿರುಮಲೇಶ್‌ಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ



ಈನ್ನಡದ ಖ್ಯಾತ ಬರಹಗಾರ ಕೆ.ವಿ.ತಿರುಮಲೇಶ್ ಅವರ ಕವನ ಸಂಗ್ರಹ 'ಅಕ್ಷಯ ಕಾವ್ಯ'ಕ್ಕೆ 2015ರ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರಾಪ್ತವಾಗಿದೆ. ಪ್ರಶಸ್ತಿ 1 ಲಕ್ಷ ರೂಪಾಯಿಗಳ ನಗದು ಪುರಸ್ಕಾರ, ತಾಮ್ರದ ಫಲಕ ಒಳಗೊಂಡಿದೆ. ಫೆ.16ರಂದು ಸಾಹಿತ್ಯ ಅಕಾಡೆಮಿ ವತಿಯಿಂದ ದೆಹಲಿಯಲ್ಲಿ ಅಕ್ಷರ ಉತ್ಸವ ಎಂಬ ವಿಶೇಷ ಕಾರ್ಯಕ್ರಮ ನಡೆಯಲಿದ್ದು, ಈ ವೇಳೆ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಸಾಹಿತಿಗಳಾದ ಜಿ.ಎನ್. ರಂಗನಾಥ್ ರಾವ್, ಹೇಮಾ ಪಟ್ಟಣಶೆಟ್ಟಿ, ರಾಘವೇಂದ್ರ ಪಾಟೀಲ್ ಅವರಿದ್ದ ಆಯ್ಕೆ ಸಮಿತಿ ಈ ಪ್ರಶಸ್ತಿಗೆ ಆಯ್ಕೆ ಮಾಡಿದೆ. ದೇಶದ ಒಟ್ಟೂ 23 ಭಾಷೆಗಳ ಕೃತಿಗಳಿಗೆ ಅಕಾಡೆಮಿ ಪ್ರಶಸ್ತಿ ಘೋಷಿಸಲಾಗಿದ್ದು, ಆರು ಕವನ ಸಂಗ್ರಹ, ನಾಲ್ಕು ಕಾದಂಬರಿ, ತಲಾ ಎರಡು ವಿಮರ್ಶೆ, ನಾಟಕ, ಪ್ರಬಂಧ ಮತ್ತು ಒಂದು ಸ್ಮರಣ ಸಂಚಿಕೆಗೆ ಪ್ರಶಸ್ತಿ ಸಂದಿದೆ. ಅ



ಇತ್ತೀಚೆಗೆ ಶರಾವತಿ ಕನ್ನಡ ಸಂಘವು ಹಿರಿಯ ಪತ್ರಕರ್ತ ಹಾಗೂ ಕನ್ನಡಪರ ಹೋರಾಟಗಾರ 'ಬಾ. ಸಾಮಗ' ಅವರಿಗೆ ಅಭಿನಂದನಾ ಕಾರ್ಯಕ್ರಮವನ್ನು ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಂಡಿತ್ತು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರುಗಳಾದ ಪ್ರೊ. ಕಮಲ್ ಪಾಷ, ಪ್ರೊ. ಎಚ್.ಎಸ್. ಪ್ರಭಾಕರ್, ಡಾ. ವೆಂಕಟಾಚಲ ಜಿ. ಹೆಗಡೆ ಹಾಗೂ ವಿಶೇಷ ಮುಖ್ಯ ಅತಿಥಿಗಳಾಗಿ ಡಾ. ಅಹಲ್ಯಾ ಚಿಂತಾಮಣಿ ಅವರು ಪಾಲ್ಗೊಂಡಿದ್ದರು. ಅ

*ಬಾಲಾಜಿ ನಾಯ್ಕ್ ಬಿ.ಜಿ.*



ದೆಹಲಿ ಒಕ್ಕಲಿಗ ಗೌಡ ಸಂಘವು ಇದೇ ಡಿಸೆಂಬರ್ 20, 2015ರಂದು ನೆಹರು ಪಾರ್ಕ್‌ಗೆ ಪಿಕ್‌ನಿಕ್ ಏರ್ಪಡಿಸಿತ್ತು. ಈ ಹಿಂದಿನ ವರ್ಷಗಳಿಗಿಂತ ಹೆಚ್ಚಾಗಿ ಸದಸ್ಯರು ಪಾಲ್ಗೊಂಡಿದ್ದರು. ವನ ಭೋಜನದ ನಂತರ ಆಟೋಟಗಳಲ್ಲಿ ವಿಜೇತರಾದ ಮಕ್ಕಳಿಗೆ ಅಧ್ಯಕ್ಷರಾದ ಶ್ರೀ ಸೋಮಶೇಖರ್, ಉಪಾಧ್ಯಕ್ಷರಾದ ಶ್ರೀ ಟಿ.ಪಿ. ಬೆಳ್ಳಿಯಪ್ಪ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ವಿ.ಆರ್. ಗುಡ್ಡೇಗೌಡರು ಬಹುಮಾನಗಳನ್ನು ವಿತರಿಸಿದರು.

# ಸಂಭ್ರಮಕ್ಕೆ ಸಾಕ್ಷಿಯಾದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ವಾರ್ಷಿಕೋತ್ಸವ



ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ (ರಿ.) ವತಿಯಿಂದ ದೆಹಲಿ ಕನ್ನಡ ಶಾಲೆಯಲ್ಲಿ ಸಂಸ್ಥೆಯ 'ಶಾಲಾ ವಾರ್ಷಿಕೋತ್ಸವ'ವನ್ನು ಇದೇ ಡಿಸೆಂಬರ್ 22, 2015ರಂದು ಸಡಗರದಿಂದ ಆಚರಿಸಲಾಯಿತು.

ಸಮಾರಂಭವನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ವಿಭಾಗ ಹಾಗೂ ಮಾನವ ಸಂಪನ್ಮೂಲ ಇಲಾಖೆ, ಭಾರತ ಸರಕಾರ ಇದರ ಜಂಟಿ ಕಾರ್ಯದರ್ಶಿಗಳಾದ ಶ್ರೀ ಸುಭಾಷ್‌ಚಂದ್ರ ಕುಂಠಿಯಾ ಅವರು ದೀಪ ಬೆಳಗಿಸಿ ಉದ್ಘಾಟಿಸಿದರು. ಬಳಿಕ ಮಾತಾನಾಡಿದ ಅವರು "ಇಂತಹ ಒಂದು ಸಮಾರಂಭವನ್ನು ಬಹಳ ಅಚ್ಚುಕಟ್ಟಾಗಿ ನಿರ್ವಹಿಸಿದ ಸಂಸ್ಥೆಯ ಆಡಳಿತ ಮಂಡಳಿ ಹಾಗೂ ಪ್ರಾಂಶುಪಾಲರಿಗೆ ಅಭಿನಂದನೆಗಳು. ಜೊತೆಗೆ ಸಂಸ್ಥೆಯ ಶೈಕ್ಷಣಿಕ ವಲಯದ ಎಲ್ಲಾ ಚಟುವಟಿಕೆಗಳಿಗೆ ಸದಾ ಸಹಕಾರ ನೀಡುವೆವು. ಅಲ್ಲದೆ ಸಂಸ್ಥೆಯು ಎಲ್ಲಾ ರಂಗದಲ್ಲಿಯೂ ಇನ್ನಷ್ಟು ಅಭಿವೃದ್ಧಿ ಹೊಂದಲಿ" ಎಂದು ಶುಭ ಹಾರೈಸಿದರು

ಕಾರ್ಯಕ್ರಮದ ಮುಖ್ಯ ಅತಿಥಿಯಾದ ಕರ್ನಾಟಕ ರಾಜ್ಯ ಬಿಜೆಪಿ ಅಧ್ಯಕ್ಷರು, ಲೋಕಸಭಾ ಸದಸ್ಯರಾದ ಶ್ರೀ ಪ್ರಹ್ಲಾದ ಜೋಷಿ ಅವರು ಸಮಾರಂಭವನ್ನು ಉದ್ದೇಶಿಸಿ "ದೆಹಲಿಯಲ್ಲಿರುವ ಎಲ್ಲಾ ಶಾಲೆಗಳಿಗೆ 'ಕನ್ನಡ ಶಾಲೆ'ಯು ಮಾದರಿಯ ಸ್ಥಾನದಲ್ಲಿದೆ. ಇಂತಹ ಸಂಸ್ಥೆಗೆ ಬಂದಿರುವುದು ನನಗೆ ಮರೆಯಲಾಗದ, ಹೆಮ್ಮೆಯ ಸಂಗತಿ. ಮತ್ತೆ ಮತ್ತೆ ಇಲ್ಲಿಗೆ ಬರುವಂತೆ ನನ್ನ ಮನಸ್ಸು ಹಂಬಲಿಸುತ್ತಿದೆ. ನಮ್ಮ ಕನ್ನಡವು ಸುಂದರವಾದ ಭಾಷೆ, ಕನ್ನಡಿಗರು ಹೇಗೆ ಹಿಂದಿಯನ್ನು ಕಲಿತರೋ ಹಾಗೆಯೇ ಕನ್ನಡೇತರರು ಕನ್ನಡವನ್ನು ಕಲಿಯಬೇಕು" ಎಂದರು.

ಬಳಿಕ ಮಾತಾನಾಡಿದ ಕೇಂದ್ರ ಸರಕಾರದ ನವೀಕರಿಸಬಹುದಾದ ಇಂಧನ ಸಚಿವಾಲಯದ (ಎಂಎನ್‌ಆರ್‌ಇ) ಕಾರ್ಯದರ್ಶಿ ಶ್ರೀ ಉಪೇಂದ್ರ ತ್ರಿಪಾಟಿ ಅವರು "ಮಾನವನು ಸಮಾಜದ ಸತ್ಪ್ರಜೆಯಾಗಲು, ನಾಗರೀಕನಾಗಲು ಶಿಕ್ಷಣದಷ್ಟೇ ಮಾತೃಭಾಷೆಯು ಅತ್ಯಗತ್ಯ. ಮಾತೃಭಾಷೆಯನ್ನು ಉಳಿಸಿ, ಬೆಳೆಸಿ ಮುನ್ನಡೆಯುತ್ತಿರುವ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕಾರ್ಯ ಶ್ಲಾಘನೀಯವಾದುದು" ಎಂದರು.

ಇನ್ನೋರ್ವ ಗೌರವಾನ್ವಿತ ಅತಿಥಿಯಾಗಿದ್ದ ಕರ್ನಾಟಕದ ಬೆಳಗಾವಿ ಸಂಸದರಾದ ಶ್ರೀ ಸುರೇಶ್ ಅಂಗಡಿ ಅವರು "ರಾಷ್ಟ್ರ ರಾಜಧಾನಿಯಲ್ಲಿ ಕನ್ನಡ ಭಾಷೆಗೊಂದು ಅಸ್ತಿತ್ವವನ್ನು ಸ್ಥಾಪಿಸಿ, ಕನ್ನಡ ಚಟುವಟಿಕೆಗಳ ಮೂಲಕ ಎಲ್ಲಾ ಹೊರನಾಡ ಕನ್ನಡಿಗರನ್ನು ಒಗ್ಗೂಡಿಸುತ್ತಿರುವ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕಾರ್ಯ ಪ್ರಶಂಸನೀಯವಾದುದು" ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಭಾರತ ಸರ್ಕಾರದ ಕಾಫಿ ಬೋರ್ಡಿನ ದೆಹಲಿ ವಿಶೇಷಾಧಿಕಾರಿ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ. ವಿ.ಆರ್ ಗುಡ್ಡೇಗೌಡ ಅವರು "ಇತ್ತೀಚಿನ ವರ್ಷಗಳಲ್ಲಿ ಸಂಸ್ಥೆಯ ಆಡಳಿತ ಹಾಗೂ ಶಿಕ್ಷಣದ ಗುಣಮಟ್ಟ ತೃಪ್ತಿದಾಯಕವಾಗಿದೆ. ಅಭಿವೃದ್ಧಿಗೆ ಮೊದಲ ಆದ್ಯತೆಯನ್ನು ನೀಡಿ ಹಲವಾರು ಕಾರ್ಯಗಳನ್ನು ಕೈಗೊಳ್ಳುತ್ತ ಪ್ರಗತಿಯತ್ತ ಸಾಗಲು ಸಂಸ್ಥೆಯು ಹಗಲಿರುಳು ಶ್ರಮಿಸುತ್ತಿದೆ" ಎಂದರು.

ಇದೇ ಸಂದರ್ಭದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಸೇವೆಯನ್ನು ಸಲ್ಲಿಸಿದ ದೆಹಲಿ ಕನ್ನಡ ಶಾಲೆಯ ಪ್ರಾಂಶುಪಾಲರಾದ ಶ್ರೀ ಕೆ. ಟಿ. ಗಣೇಶ್ ಅವರನ್ನು ಫಲಪುಷ್ಪ, ಸ್ಮರಣಿಕೆ, ಸನ್ಮಾನ ಪತ್ರದೊಂದಿಗೆ ಗೌರವಿಸಲಾಯಿತು. ಬಳಿಕ ಪ್ರಾಂಶುಪಾಲರು ಸಂಸ್ಥೆಯ ವರದಿ ವಾಚಿಸಿದರು. ಕಳೆದ ಸಾಲಿನಲ್ಲಿ ಸಿಬಿಎಸ್‌ಇ ನಡೆಸಿದ ಪರೀಕ್ಷೆಗಳಲ್ಲಿ ಅತ್ಯಧಿಕ ಅಂಕ ಗಳಿಸಿದ ಸಂಸ್ಥೆಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಹುಮಾನವನ್ನು ವಿತರಿಸಲಾಯಿತು.

ನಂತರ ನಡೆದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳ ಕಲಾ ಪ್ರತಿಭೆಯು ಅನಾವರಣಗೊಂಡಿತು. ಏಕತೆಯನ್ನು ಬಿಂಬಿಸುವ 'ಮಿಲೆ ಸುರ್ ಮೇರಾ ತುಮ್ಹಾರ' ಎಂಬ ಶಿಕ್ಷಕರ ವಿನೂತನ ಕಾರ್ಯಕ್ರಮ ಎಲ್ಲರ ಮನಸೆಳೆದವು.

ಸಮಾರಂಭದಲ್ಲಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರಾದ ಕೆ. ಆರ್. ರಾಮಮೂರ್ತಿ, ಗೌರವ ಕಾರ್ಯದರ್ಶಿ ಸಿ. ಆರ್. ಶ್ರೀನಿವಾಸ್ ಹಾಗೂ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು. ಶಿಕ್ಷಕರಾದ ಕುಮಾರಿ ವಂದನಾ, ಕುಮಾರಿ ಬಿದಿಶಾ ಕಾರ್ಯಕ್ರಮ ನಿರ್ವಹಿಸಿದರು.

*ಅರವಿಂದ ಬಿಜ್ಜೈ*

# ಮದ್ವ ಸಂಘ ನೂತನ ಕಾರ್ಯಕಾರಿ ಸಮಿತಿ



**ಅಧ್ಯಕ್ಷರು** : ಡಾ. ಮಧುಸೂಧನ್ ರಾವ್, **ಉಪಾಧ್ಯಕ್ಷರುಗಳು** : ಶ್ರೀ ಕೆ.ಆರ್. ರಾಮಮೂರ್ತಿ, ಶ್ರೀ ಬಿ. ಅನಿಲ್ ಕುಮಾರ್, **ಕಾರ್ಯದರ್ಶಿ** : ಶ್ರೀ ನಾರಾಯಣ ಕುಲಕರ್ಣಿ, **ಜಂಟಿ ಕಾರ್ಯದರ್ಶಿ** : ಶ್ರೀಮತಿ ಕವಿತಾ ರಾಘವೇಂದ್ರ, **ಖಜಾಂಚಿ** : ಶ್ರೀ ರಮೇಶ್ ಕುಲಕರ್ಣಿ. **ಸದಸ್ಯರುಗಳು** : ಶ್ರೀ ವೇಣುಗೋಪಾಲ್ ರಾವ್, ಶ್ರೀ ಅರವಿಂದ್ ಮಿಟ್ಟಿಮನಿ, ಶ್ರೀ ಆರ್. ಶ್ರೀನಿವಾಸನ್, ಶ್ರೀ ಜಿ. ಗುರುರಾಜ್, ಶ್ರೀ ಕೆ. ಸದಾಶಿವ ಭಟ್, ಶ್ರೀ ಡಿ.ಎಸ್. ಶ್ರೀನಿವಾಸ್, ಶ್ರೀ ಎಂ. ರವಿ, ಶ್ರೀ ಎಸ್.ಎನ್. ಮೂರ್ತಿ, ಶ್ರೀ ಬಿ.ಎಸ್. ರಾಘವೇಂದ್ರ ಆಚಾರ್.

ಪ್ರತಿ ವರ್ಷದಂತೆ ಈ ಬಾರಿಯೂ ಪುರಂದರ ದಾಸರ ಆರಾಧನೆಯ ಅಂಗವಾಗಿ ಜನವರಿ 31, ಭಾನುವಾರ ಸಂಜೆ ಮಕ್ಕಳಿಗಾಗಿ ಕೀರ್ತನೆಗಳನ್ನು ಹಾಡುವ ಸ್ಪರ್ಧೆಯನ್ನು ಮದ್ವ ಸಂಘ, ಶ್ರೀ ಕೃಷ್ಣಮಂದಿರ, ಸಫ್ದರ್‌ಜಂಗ್‌ನಲ್ಲಿ ಏರ್ಪಡಿಸಿದೆ. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.


## ಜನಕಪುರಿ ಮಹಿಳಾ ಮಂಡಳಿಯ ನೂತನ ಕಾರ್ಯಕಾರಿ ಸಮಿತಿ



ಜನಕಪುರಿಯ ಮಹಿಳಾ ಮಂಡಳಿಯು ಇತ್ತೀಚೆಗೆ ಸಭೆ ಸೇರಿ ನೂತನ ಕಾರ್ಯಕಾರಿ ಸಮಿತಿಗೆ ಈ ಕೆಳಗಿನವರನ್ನು ಆಯ್ಕೆ ಮಾಡಲಾಗಿದೆ.

**ಅಧ್ಯಕ್ಷೆ** : ಶ್ರೀಮತಿ ಜಯಶ್ರೀ ಬಸವರಾಜು, **ಕಾರ್ಯದರ್ಶಿ** : ಶ್ರೀಮತಿ ಪವಿತ್ರಾತಮಣ್ಕರ್, **ಜಂಟಿ ಕಾರ್ಯದರ್ಶಿ** : ಶ್ರೀಮತಿ ಮಾಲಿನಿ ಪ್ರಹ್ಲಾದ್, **ಖಜಾಂಚಿ** : ಡಾ. ಸಾಯಿಪ್ರಶಾಂತಿ ಶೆಟ್ಟಿ, **ಸದಸ್ಯರುಗಳು** : ಶ್ರೀಮತಿ ಮಮತಾ ಎಸ್ ಬಾಬು, ಶ್ರೀಮತಿ ಸವಿತಾ ಭಂಡಾರ್‌ಕರ್, ಶ್ರೀಮತಿ ಸವಿತಾ ನೆಲ್ಲಿ.

## ಕಿರಣ್ ಆರ್. ಪಾಂಡೆ ಅವರ ವಾಯೋಲಿನ್ ರಂಗ ಪ್ರವೇಶ



ಕನ್ನಡಿಗ ಕಿರಣ್ ಆರ್. ಪಾಂಡೆ ಅವರ ವಾಯೋಲಿನ್ ರಂಗ ಪ್ರವೇಶ 25 ಡಿಸೆಂಬರ್ 2015ರಂದು ದೆಹಲಿ ತಮಿಳ್ ಸಂಘಂ ನಲ್ಲಿ ನಡೆಯಿತು. ದೆಹಲಿಯ ಸ್ಪಿಂಗ್‌ಡೇಲ್ ಸ್ಕೂಲ್‌ನಲ್ಲಿ 8ನೇ ತರಗತಿಯಲ್ಲಿ ವಿದ್ಯಾಭ್ಯಾಸ ನಡೆಸುತ್ತಿರುವ ಕಿರಣ್ ಅವರು ಬಾಲ್ಯದಿಂದಲೇ ಗುರು ಕಲಾಯಿಮಾಮಣಿ ಅವರಿಂದ ತರಬೇತಿ ಪಡೆಯುತ್ತಿದ್ದಾರೆ. ಕಿರಣ್ ಅವರು ಸಂಘದ ಆಜೀವ ಸದಸ್ಯರುಗಳಾದ ಶ್ರೀಮತಿ ವನಿತಾ ಆರ್. ಪಾಂಡೆ ಮತ್ತು ಶ್ರೀ ರಿಷಿಕೇಶ್ ಪಾಂಡೆ ಅವರ ಪುತ್ರ.

# ವಿಶ್ವ ಮಾನವ ಸಂದೇಶ ನೀಡಿದ ರಾಷ್ಟ್ರಕವಿ ಕುವೆಂಪು ಅವರಿಗೆ ನಮನ



ನಮ್ಮ ನಾಡಿನ ಹೆಮ್ಮೆಯ ಸಾಹಿತಿ 'ಓ ನನ್ನ ಚೇತನ, ಆಗು ನಿ ಅನಿಕೇತನ' ಅನ್ನೊ ವಿಶ್ವಮಾನವ ಸಂದೇಶವನ್ನು ಸಾರಿದ ರಾಷ್ಟ್ರಕವಿ ಕುವೆಂಪು. ಊರಿನ ಮತ್ತು ತಂದೆಯ ಹೆಸರನ್ನು ತನ್ನ ಹೆಸರಿನ ಜೊತೆ ಸೇರಿಸಿಕೊಂಡು ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ, 'ಕುವೆಂಪು' ಆಗಿ ಲೋಕ ವಿಖ್ಯಾತರಾದರು.

20ನೆಯ ಶತಮಾನದ ಆರಂಭದಲ್ಲಿ ಇಂಗ್ಲಿಷ್ ವ್ಯಾಮೋಹ ಹೆಚ್ಚಿತ್ತು. ಮೊದ ಮೊದಲು ಇಂಗ್ಲೀಷ್‌ನಲ್ಲಿ ಬರೆಯಲು ಶುರು ಮಾಡಿದ್ದ ಕುವೆಂಪುರವರು ಜೇಮ್ಸ್ ಕಸಿನ್ಸ್ ಎಂಬ ಐರಿಷ್ ಕವಿಯ ಪ್ರೇರಣೆಯಿಂದ ಮಾತೃಭಾಷೆಯಲ್ಲಿ ಬರೆಯಲು ಉದ್ದೇಶಿಸಿದರು. ವೃತ್ತಿಯಲ್ಲಿ ಉಪನ್ಯಾಸಕರಾಗಿದ್ದ ಕುವೆಂಪು ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿ ದುಡಿದಿದ್ದಾರೆ.

**ಸಮುದಾಯ ಸುಧಾರಣೆ**

ಕನ್ನಡಕ್ಕಾಗಿ ದುಡಿದು ಕನ್ನಡಕ್ಕಾಗಿ ಬದುಕಿದ ಈ ರಸಋಷಿ ತಮ್ಮ ಬದುಕಿನಲ್ಲಿ ಸಮುದಾಯ ಸುಧಾರಣೆಯ ಪರಿಕಲ್ಪನೆಯಂತೆ ಮಂತ್ರಮಾಂಗಲ್ಯ ಅವರ ಪುತ್ರ ಪೂರ್ಣಚಂದ್ರ ತೇಜಸ್ವಿ ವಿವಾಹದ ಆಹ್ವಾನ ಪತ್ರಿಕೆಯಲ್ಲಿ ಸಮಯ ಸಿಕ್ಕಾಗ ಬಂದು ವಧು ವರರನ್ನು ಆಶೀರ್ವದಿಸಿ ಎಂದು ಉಲ್ಲೇಖಿಸಿದರು.

ಅವರ ಕಾವ್ಯ, ಗೀತೆ ಮತ್ತು ನಾಟಕಗಳು ಜನ ಮನ ಗೆದ್ದಿದೆ. ಅವರ ಬಿರುಗಾಳಿ, ಮಹರಾತ್ರಿ, ಯಮನ ಸೋಲು, ಸ್ಮಶಾನ ಕುರುಕ್ಷೇತ್ರ ಕಾವ್ಯಗಳು ಗೀತೆಗಳಿಗಾಗಿ ಜನಮನಸು ಗೆದ್ದಿದೆ. ಕಾನೂರು ಹೆಗ್ಗಡತಿ ಮತ್ತು ಮಲೆಗಳಲ್ಲಿ ಮದುಮಗಳು ಕೃತಿಗಳಲ್ಲಿ ಸಹ್ಯಾದ್ರಿ ಮತ್ತು ಮಲೆನಾಡಿನ ಸುತ್ತಮುತ್ತಲಿನ ಸಮೃದ್ಧ ಜೀವನ ಮತ್ತು ಸಂಸ್ಕೃತಿಯನ್ನೇ ತೆರೆದಿಟ್ಟಿದ್ದಾರೆ. ಮಕ್ಕಳ ಸಾಹಿತ್ಯ, ಅನುವಾದ ಸಾಹಿತ್ಯ, ವಿಮರ್ಶೆ ಸಾಹಿತ್ಯದಲ್ಲೂ ಕುವೆಂಪು ಕೈ ಆಡಿಸಿದ್ದಾರೆ.

ದೇಶದ ಪ್ರತಿಷ್ಠಿತ ಪ್ರಶಸ್ತಿಗಳೆಲ್ಲ ಕುವೆಂಪುರವರು ಬಯಸದಿದ್ದರು, ಅವರ ಅಪ್ರತಿಮ ಕಾರ್ಯಕ್ಕೆ ಗೌರವ ಸಂದಿದೆ. ವಿಶ್ವ ಸಾಹಿತ್ಯದಲ್ಲಿ 1964ರಲ್ಲಿ ರಾಷ್ಟ್ರಕವಿ ಎಂಬ ಗೌರವ ಸ್ವೀಕರಿಸಿ ಕನ್ನಡಕ್ಕೆ ಗೌರವ ತಂದು ಕೊಟ್ಟಿದ್ದಾರೆ. ಅಲ್ಲದೆ ಕನ್ನಡಕ್ಕೆ ಮೊದಲ ಜ್ಞಾನಪೀಠ ಪ್ರಶಸ್ತಿ 1967ರಲ್ಲಿ ರಾಮಾಯಣ ದರ್ಶನಂಗೆ ದಕ್ಕಿತು.

ಕುವೆಂಪು ಅವರು ಹೊಸ ಹುಟ್ಟುಗಳಿಗೆ ಕಾರಣವಾಗಿದ್ದಾರೆ. ಅನೇಕ ಹೊಸ ಗುಟ್ಟುಗಳನ್ನು ತೆರೆದು ತೋರಿಸಿದ್ದಾರೆ. ತಮ್ಮ ಲೇಖನಿಯಿಂದ ಕತೆ, ಕಾದಂಬರಿ, ಕಾವ್ಯ, ನಾಟಕ, ವಿಮರ್ಶೆ, ಪ್ರಬಂಧ, ಮಕ್ಕಳ ಸಾಹಿತ್ಯ, ಜೀವನಚರಿತ್ರೆ, ಆತ್ಮಚರಿತ್ರೆ ಹೀಗೆ ಹತ್ತು ಹಲವಾರು ಕ್ಷೇತ್ರಗಳಲ್ಲಿ ಕೈಯಾಡಿಸಿ ಎಲ್ಲ ಕಾಲದ ಸಾಹಿತ್ಯ ದಿಗ್ಗಜರುಗಳಿಗಿಂತ ಅವರ ಕೊಡುಗೆ ಭಿನ್ನ.

ವಿಶ್ವಮಾನ ಸಂದೇಶವನ್ನು ಜಗತ್ತಿಗೆ ಸಾರಿದ ಯುಗದ ಮತ್ತು ಜಗದ ರಾಷ್ಟ್ರಕವಿ ಕುವೆಂಪುರವರ ಜನ್ಮದಿನವನ್ನು 'ವಿಶ್ವಮಾನವ ದಿನಾಚರಣೆ'ಯಾಗಿ ಆಚರಿಸಲು ನಿರ್ಧರಿಸಿರುವುದು ನಿಜಕ್ಕೂ ಮುಂದಿನ ಪೀಳಿಗೆಯವರಿಗೂ ಅವರ ನಿಲುವು ಮತ್ತು ಬರಹಗಳ ಸಂಪತ್ತನ್ನು ಪರಿಚಯಿಸಲು ಸಹಕಾರಿಯಾಗಬಹುದಾಗಿದೆ. ಅ

***ಹರಿಪ್ರಿಯ ಎಸ್***

# ಜನಕಪುರಿ ಕನ್ನಡ ಕೂಟದ ಆಟೋಟ ಸ್ಪರ್ಧೆ ಮತ್ತು ಕನ್ನಡ ರಾಜ್ಯೋತ್ಸವ ಆಚರಣೆ

ಜನಕಪುರಿ ಕನ್ನಡಕೂಟ ಡಿಸೆಂಬರ್ 20, 2015 ರಂದು ಕನ್ನಡ ರಾಜ್ಯೋತ್ಸವ ಆಚರಿಸಿತು. ಇದರ ಅಂಗವಾಗಿ ಹಮ್ಮಿಕೊಂಡಿದ್ದ ಕ್ರೀಡಾ ಸ್ಪರ್ಧೆಗಳಲ್ಲಿ ಎಲ್ಲಾ ಸದಸ್ಯರುಗಳು ಕೂಡಿ ವಿವಿಧ ಆಟೋಟಗಳನ್ನು ಆಡಿ ಮನರಂಜಿಸಿದರು. ಕ್ರೀಡಾಕೂಟದ ಅಂಗವಾಗಿ ಮಕ್ಕಳು, ಮಹಿಳೆಯರು, ಪುರುಷರು ಮತ್ತು ಹಿರಿಯ ಸದಸ್ಯರಿಗೆ ಓಟ, ವೇಗದ ನಡಿಗೆ, ಬಕೆಟ್‌ನಲ್ಲಿ ಚೆಂಡು ಹಾಕುವುದು, ಗುಂಡು ಎಸೆತ (ಶಾಟ್‌ಪುಟ್) ಇತ್ಯಾದಿ ಆಟೋಟಗಳನ್ನು ಆಯೋಜಿಸಲಾಗಿತ್ತು.

ಇದೇ ಸಂದರ್ಭದಲ್ಲಿ ದೆಹಲಿಯಿಂದ ತವರಿಗೆ ತೆರಳುತ್ತಿರುವ ಹಿರಿಯ ದೆಹಲಿ ಕನ್ನಡಿಗರೂ ಹಾಗೂ ಜನಕಪುರಿ ಕನ್ನಡ ಕೂಟದ ಮಾಜಿ ಅಧ್ಯಕ್ಷರಾದ ಹೆಚ್. ಎನ್.ಎಸ್. ರಾವ್ ಮತ್ತು ಜನಕಪುರಿ ಮಹಿಳಾ ಮಂಡಳಿಯ ಅಧ್ಯಕ್ಷೆ ಆಗಿದ್ದ ಅವರ ಧರ್ಮಪತ್ನಿ ಶ್ರೀಮತಿ ಮೀರಾನಾಡಿಗ್ ದಂಪತಿಗಳನ್ನು ಬೀಳ್ಕೊಡಲಾಯಿತು. ಬೀಳ್ಕೊಡುಗೆ ಸ್ವೀಕರಿಸಿದ ಹೆಚ್.ಎನ್.ಎಸ್. ರಾವ್ ದಂಪತಿಗಳು ಹೊರನಾಡಿನ ಕನ್ನಡಿಗರಾಗಿ ತಾವು ಪಡೆದ ಅನುಭವಗಳನ್ನು ಹಂಚಿಕೊಳ್ಳುತ್ತಾ ಅವರು ದೆಹಲಿಗೆ ಬಂದ ಆ ದಿನಗಳಲ್ಲಿ ಈಗಿರುವಷ್ಟು ಸಂಪರ್ಕ ಸೌಕರ್ಯ ಇಲ್ಲದಿದ್ದುದರಿಂದ ಬಹಳ ಕಷ್ಟಪಟ್ಟು ಕನ್ನಡಿಗರ ಮನೆ ಮನೆಗಳನ್ನು ಹುಡುಕಿಕೊಂಡು ಹೋಗಿ ಕರೆದು ತಂದು ಸಂಘ ಸಂಸ್ಥೆಗಳಿಗೆ ಸದಸ್ಯರನ್ನಾಗಿ ಮಾಡುತ್ತಿದ್ದ ಬಗೆಯನ್ನು ನೆನಪಿಸಿಕೊಂಡರು. ಅದೇ ರೀತಿ ಈಗ ಹೆಚ್ಚಿನ ಸಂಪರ್ಕ ಸಾಧನಗಳು ಲಭ್ಯವಿದ್ದು ಇದನ್ನು ಇನ್ನು ಉತ್ತಮ ರೀತಿಯಿಂದ ಬಳಸಿಕೊಂಡು ಎಲ್ಲ ಕನ್ನಡಿಗರನ್ನು ಒಂದುಗೂಡಿಸಿಕೊಂಡು ನಮ್ಮ ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು ಹೋಗಬೇಕೆಂದು ಹಿತನುಡಿಗಳನ್ನು ಹೇಳಿದರು.

ಬೀಳ್ಕೊಡುತ್ತಿರುವ ದಂಪತಿಗಳನ್ನು ಕುರಿತು ಎಂ. ಧೀರೇಂದ್ರ ರಾವ್ ಮತ್ತು ಎಸ್. ಎಲ್. ಭಂಡಾರ್‌ಕರ್ ಅವರು ಮಾತನಾಡಿ ದಂಪತಿಗಳಿಬ್ಬರೂ ಜನಕಪುರಿ ಕನ್ನಡ ಕೂಟ ಮತ್ತು ದೆಹಲಿ ಕರ್ನಾಟಕ ಸಂಘವೂ ಸೇರಿದಂತೆ ಇತರೆ ಸಂಘ ಸಂಸ್ಥೆಗಳಿಗೆ ಸಲ್ಲಿಸಿದ ಸೇವೆಯನ್ನು ಶ್ಲಾಘಿಸಿದರು. ಇದರ ಜೊತೆಗೆ ಮತ್ತೊಬ್ಬ ಹಿರಿಯ ದೆಹಲಿ ಕನ್ನಡಿಗ, ಜನಕಪುರಿ ಕನ್ನಡ ಕೂಟದ ಹಿತೈಷಿಗಳೂ ಹಾಗೂ ದೆಹಲಿ ಕರ್ನಾಟಕ ಸಂಘದ ಕೋಶಾಧಿಕಾರಿಯಾದ ಕೆ.ಎಸ್.ಜಿ.ಶೆಟ್ಟಿ ಅವರ 64ನೇ ಹುಟ್ಟು ಹಬ್ಬವನ್ನು ಆಚರಿಸಲಾಯಿತು.

ಜನಕಪುರಿ ಕನ್ನಡ ಕೂಟದ ಅಧ್ಯಕ್ಷರಾದ ಬಿ.ಕೆ. ಬಸವರಾಜು ಅವರು ಹೆಚ್.ಎನ್. ಎಸ್.ರಾವ್ ಅವರಿಗೆ ಹೂಗುಚ್ಛ ನೀಡಿದರು ಮತ್ತು ಜನಕಪುರಿ ಮಹಿಳಾ ಮಂಡಳಿ ಅಧ್ಯಕ್ಷೆ ಶ್ರೀಮತಿ ಜಯಶ್ರೀ ಬಸವರಾಜು ಅವರು ಶ್ರೀಮತಿ ಮೀರಾ ನಾಡಿಗ್ ಅವರಿಗೆ ಹೂಗುಚ್ಛ ನೀಡಿ ಶುಭ ಕೋರಿದರು. ಹುಟ್ಟು ಹಬ್ಬದ ಅಂಗವಾಗಿ ಕೆ.ಎಸ್.ಜಿ. ಶೆಟ್ಟಿ ಅವರಿಗೆ ಬಿ.ಕೆ. ಬಸವರಾಜು ಅವರು ಹೂಗುಚ್ಛ ನೀಡಿ ಶುಭ ಕೋರಿದರು. ಕಾರ್ಯದರ್ಶಿ ಗಂಗಾಧರ್ ಅವರು ವಂದನಾರ್ಪಣೆ ಮಾಡಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಅತ್ಯುತ್ತಮವಾದ ಭೋಜನ ಏರ್ಪಡಿಸಲಾಗಿತ್ತು. ಅ

***ಅಭಿಮತ ವರದಿ***



# ದೆಹಲಿ ಕರ್ನಾಟಕ ಸಂಘ

## DELHI KARNATAKA SANGHA

**Sector-12, Rao Tula Ram Marg, R.K.Puram, New Delhi – 110022**

ದೆಹಲಿ ಕರ್ನಾಟಕ ಸಂಘವು 2015–16ನೇ ಸಾಲಿನ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ ಹಾಗೂ ವಿವಿಧ ಕ್ರೀಡಾ ಸ್ಪರ್ಧೆಗಳನ್ನು ವಾರ್ಷಿಕೋತ್ಸವದ ಅಂಗವಾಗಿ ಜನವರಿ 30, ಫೆಬ್ರವರಿ 06, 07, 13, ಮತ್ತು 14, 2016ರಂದು ಜೆ.ಎನ್.ಯುವಿನ ಹಳೇ ಕ್ಯಾಂಪಸ್‌ನಲ್ಲಿ ಆಯೋಜಿಸಿದೆ. ಸಂಘದ ಸದಸ್ಯರು ಮತ್ತು ಅವರ ಕುಟುಂಬದವರು ಈ ಸ್ಪರ್ಧೆಗಳಲ್ಲಿ ಭಾಗವಹಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ವಿನಂತಿ.

Delhi Karnataka Sangha is organizing Ambikesh Memorial Cricket Tournament along with various Sports events as part of the Annual Day Celebration for the year 2015-16 on Jan 30, Feb 06,07,13 and 14, 2016 at JNU Old Campus. You are cordially invited with your family to make the programme a grand success.

The focus of the Sangha is to encourage the members and their children to participate in the events organised by the Sangha. Members are, therefore, requested to make use of the opportunity wholeheartedly by participating in the events.

Please find enclosed Programme Schedule, Entry Form, and Rules for the Competitions for your kind information.

Vasantha Shetty Bellare
President

C.M. Nagaraja
General Secretary

---

### Entry Form for Sports and Cultural Competitions

(Please see instructions and table of events)

| Sl. No | Name of the Participant & Phone / Mobile No. | Age (Yrs.) as on 01.03.2016 | Date of Birth | Sex M/F | Event Code | Total No of Events | Amount (Rs.) |
|---|---|---|---|---|---|---|---|
| 1. | | | | | | | |
| 2. | | | | | | | |
| 3. | | | | | | | |
| 4. | | | | | | | |
| 5. | | | | | | | |
| 6. | | | | | | | |
| | | | | | | Total | |

***Note: Enclose Copy of Birth Certificate.***

I ______________________________ shall abide by the Rules/regulations of the Competition. The Sangha shall not be held responsible for any accidental eventualities during the events.

…………………………..

Name of the Member: Signature of Participant/

Membership No: (Parent in case of Minor)

Membership: Life / Annual

Tel/Mobile No : Date:

***Note : Table of events, entry form, rules for competitions are enclosed herewith***

## *RULES FOR COMPETITIONS*

1. Participant / Parents must be member of Delhi Karnataka Sangha.
2. Entry fee for group events (Kabaddi, Volley Ball, Throw Ball) – Rs. 500/-
   i) Entry fee for Lagori – Rs. 300/-
   ii) Entry fee for Shuttle Badminton – Rs. 100/-
   iii) Table Tennis – Rs. 100/-
   iv) Carrom, Chess (Singles & Doubles) - Rs. 50/-
   v) All individual events fees Rs. 30/-
   vi) Children below 15 year no entry fee (Only for track events)
3. Entry forms must be submitted at Delhi Karnataka Sangha Office. (All the participants shall attach a photocopy of Birth Certificate & Parents Sangha ID Card alongwith entry forms)
4. Last date for entry for all events **25.01.2016** till **8.00**pm.
5. For details of events, please refer Programme Schedule attached.
6. Non-reporting of the participants at the stipulated time may result in awarding walkover.
7. Sports Organising Committee has the right to cancel the events depending upon the response and need of the hour.
8. Any change regarding the venue will be intimated separately.
9. Fixture / Ties will be drawn two days before the beginning of the competition.
10. The Participants are requested to bring the Sports Materials (Racquet, Striker etc) required for the events by themselves.
11. The modalities of conducting the events shall be notified from time to time at Notice Board of the Sangha.
12. Participants shall reach the venue of the events at their own conveyance.
13. While the persons in charge will be responsible for conducting events, they may take additional assistance of persons of their choice in consultation with the Convener of the Sports Sub- Committee.
14. Use of Stencils, Chalk-Piece, Pencil, Sieving and Pen is not permitted in Rangoli Competition.
15. For any event, if there are less than 4 participants that event may be cancelled.
16. The decision of the Sports Organising Committee / Organiser shall be the final in respect of conducting/ cancellation of the event, subject to the minimum entry response required, non-availability of resources to conduct competitions etc.
17. In case of cultural events, the judgments given by the panel of judges will be final.
18. Track event prizes: First, Second & Third. For other events: First & Second only.

**DR. M S SHASHIKUMAR**
CHAIRMAN

**T.P.BELLIAPPA**
CONVENOR

**SPORTS SUB COMMITTEE**

# Annual Day Sports Events 2015-16

**Programme Schedule**

***Venue : JNU Old Campus, New Delhi Time : 9.00am***

| Code No. | Event | Category | Age | Date |
|---|---|---|---|---|
| 1 | Throw Ball **(10 Members)** | Women | | 30.01.2016 |
| 2 | Table tennis-Singles | Men | Open | 30.01.2016 |
| 3 | Table tennis-Singles | Girls | Open | 30.01.2016 |
| 4 | Shot-Put | Women | Below 35 yrs | 30.01.2016 |
| 5 | Shot-Put | Women | 36 above | 30.01.2016 |
| 6 | Shot-Put | Men | 36-49 yrs | 30.01.2016 |
| 7 | Shot-Put | Men | 50 above | 30.01.2016 |
| 8 | Shot-Put | Men | Below 35 yrs | 30.01.2016 |
| 9 | Threading the Needles | Couples | 40 above | 30.01.2016 |
| 10 | Lemon & Spoon 100 Mtrs. | Women | 30 above | 30.01.2016 |
| 11 | Shuttle Badminton Singles | Men | 15 above | 06.02.2016 |
| 12 | Shuttle Badminton Singles | Women | 15 above | 06.02.2016 |
| 13 | Lagori **(Mix-2 Male+2 Female)** | | | 07.02.2016 |
| 14 | Running Race 200 Mtrs. | Men | Open | 07.02.2016 |
| 15 | Running Race 400 Mtrs. | Men | Open | 07.02.2016 |
| 16 | Running Race 100 Mtrs. | Men | 41 above | 07.02.2016 |
| 17 | Volley Ball **(10 Members)** | Men | | 13.02.2016 |
| 18 | Three Leg Race 100 Mtrs. | Men | Open | 13.02.2016 |
| 19 | 4X100 Mtrs. Relay | Men | Open | 13.02.2016 |
| 20 | Kabaddi **(10 members)** | Men | | 14.02.2016 |
| 21 | Tug off War **(11Members)** | General | | 14.02.2016 |
| 22 | Kho Kho | | | 14.02.2016 |

*Please Note: For team events minimum 3 teams entry is must.*


| | | | | |
|---|---|---|---|---|
| 23 | Running Race 50 Mtrs. | General | 3-5 yrs. | 06.02.2016 |
| 24 | Running Race 50 Mtrs. | Girls | 6-8 years | 06.02.2016 |
| 25 | Running Race 100 Mtrs. | Girls | 9-12 years | 06.02.2016 |
| 26 | Running Race 100 Mtrs. | Girls | 15 above | 06.02.2016 |
| 27 | Running Race 200 Mtrs. | Girls | 15 above | 06.02.2016 |
| 28 | Running Race 100 Mtrs. | Women | 21-35yrs. | 06.02.2016 |
| 29 | Running Race 100 Mtrs. | Women | 36 above | 06.02.2016 |
| 30 | Running Race 400 Mtrs. | Women | Open | 06.02.2016 |
| 31 | Speed Walk 400 Mtrs. | Women | 41-49 Yrs. | 06.02.2016 |
| 32 | Speed Walk 400 Mtrs. | Women | 50 above | 06.02.2016 |
| 33 | 4X50 Mtrs. Relay | Women | Open | 06.02.2016 |
| 34 | Running Race 50 Mtrs. | Boys | 6-8 years | 06.02.2016 |
| 35 | Running Race 100 Mtrs. | Boys | 9-12 years | 06.02.2016 |
| 36 | Running Race 100 Mtrs. | Boys | 15 above | 06.02.2016 |
| 37 | Running Race 200 Mtrs. | Boys | 15-20 Years | 06.02.2016 |
| 38 | Three Leg Race 100 Mtrs. | Men | Below 15yrs | 06.02.2016 |
| 39 | Running Race 400 Mtrs. | Men | 45-49 yrs. | 06.02.2016 |
| 40 | Speed Walk 400 Mtrs. | Men | 50 above | 06.02.2016 |
| 41 | Carrom Singles | Men | 15 above | 20.02.2016 |
| 42 | Carrom Singles | women | 15 above | 20.02.2016 |
| 43 | Carrom doubles | M/F (Mix) | 15 above | 20.02.2016 |
| 44 | Chess | Common | 10 above | 20.02.2016 |

## Ambikesh Memorial Cricket Tournament-2015-16

**Programme Schedule- Date : 30.01.2016, 06.02.2016, 07.02.2016, 13.02.2016 & 14.02.2016**

***Venue : JNU Old Campus, New Delhi @ 9.00am***

## ಓದುಗರ ಪತ್ರ




ಇಪ್ಪತ್ತೈದು ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದ ನಮ್ಮ ನೆಚ್ಚಿನ ಹೆಮ್ಮೆಯ ಅಭಿಮತ ಪತ್ರಿಕೆಯ ವಿಶೇಷ ಸಂಚಿಕೆಯು ಕೈಸೇರಿದೆ. ಮತ್ತೆ ಮತ್ತೆ ಓದಬೇಕೆನ್ನುವ ಲವಲವಿಕೆಯನ್ನು ಈ ವಿಶೇಷ ಸಂಚಿಕೆಯು ನನ್ನಲ್ಲಿ ಮೂಡಿಸಿತು. ಅಭಿಮತ ಪತ್ರಿಕೆಯು ದಿಲ್ಲಿಯ ನನ್ನ ದೇವನಗರದ ಮನೆಯ ಡ್ರಾಯಿಂಗ್ ರೂಮ್‌ನಲ್ಲಿ ನಾಲ್ಕು ಪುಟಗಳ ಸಂಚಿಕೆಯಾಗಿ ಹೊರ ಬರುತಿತ್ತು. 1990ನೇಯ ಸಾಲಿನಲ್ಲಿ ಅಕ್ಟೋಬರ್ 2ರಂದು ನಮ್ಮ ದೇಶದ ವಿದೇಶಾಂಗ ಖಾತೆಯಲ್ಲಿ ರಾಯಭಾರಿಯಾಗಿ ನಿವೃತ್ತಿಯನ್ನು ಹೊಂದಿದ್ದ ಶ್ರೀಮತಿ ಕೊಡಗಿನ ಮುತ್ತಮ್ಮ ಅವರಿಂದ ಬಿಡುಗಡೆ ಹೊಂದಿ ಹೊರಬಂದ ಅಭಿಮತದ ಪ್ರಪ್ರಥಮ ಸಂಚಿಕೆಯ ವಿನ್ಯಾಸವನ್ನು ಮಾಡಿ ಅಂದವಾಗಿ ಪ್ರಕಟಿಸಿದವರು ನಿಜವಾಗಿಯೂ ನಮ್ಮೆಲ್ಲರ ಹೆಗ್ಗಳಿಕೆಯ ಜೆ.ಎನ್.ಯು.ವಿನಲ್ಲಿ ಇದೀಗ ಪ್ರಾಧ್ಯಾಪಕರಾಗಿರವ ಡಾ. ವೆಂಕಟಾಚಲ ಹೆಗಡೆ ಅವರು. ಅಂದಿನ ಆ ದಿನಗಳೆಲ್ಲ ನನ್ನ ಮನಃಪಟಲದಲ್ಲಿ ಹಾದುಹೋಗಿ ಕೆಲಹೊತ್ತು ನನ್ನ ಮನೆಯ ಗಡಿಯಾರ ಸ್ತಬ್ಧವಾದಂತಿತ್ತು!. ಅಭಿಮತದ ವಿಶೇಷ ಸಂಚಿಕೆಯನ್ನು ಯಶಸ್ವಿಯಾಗಿ ವೈಭವಪೂರ್ಣವಾಗಿ ಹೊರತಂದಿರುವ ಇಂದಿನ ಅಭಿಮತ ಪತ್ರಿಕೆಯ ಬಳಗದ ಎಲ್ಲರನ್ನು ಈ ದೂರದಲ್ಲಿ ಕುಳಿತು ಕೃತಜ್ಞತೆಯಿಂದ ನೆನೆಯುತ್ತಿದ್ದೇನೆ. ಇಂತಹ ಬಳಗವನ್ನು ಪಡೆದ ಅಭಿಮತ ಪತ್ರಿಕೆ ನಿಜಕ್ಕೂ ಧನ್ಯ ಎಂದು ನನ್ನ ಭಾವನೆ. ನನ್ನ ಸಮ್ಮುಖದಲ್ಲಿ ಉದ್ಭವಿಸಿದ ಅಭಿಮತ ಪತ್ರಿಕೆ ಎಷ್ಟು ಹಸನಾಗಿ ಎಷ್ಟು ಹುಲುಸಾಗಿ ಮೂಡಿ ಬರುತ್ತಿರುವುದನ್ನು ಕಂಡು ನಾನು ಆನಂದಭರಿತನಾಗಿರುವೆ. ವಿಶೇಷ ಸಂಚಿಕೆಯು ವೈವಿಧ್ಯಮಯವಾಗಿ ಅಂದಿನ ಇಂದಿನ ಅಭಿಮತದ ಲೇಖಕರನ್ನು ಒಂದುಗೂಡಿಸಿ ಒಂದು ಅಭೂತಪೂರ್ವ ಮೆರುಗನ್ನು ತಂದಿದೆ. ಸಂಘದ ಕ್ರಿಯಾಶೀಲ ಹಾಗೂ ಕನ್ನಡ ನಾಡುನುಡಿಯ ಬಂಟರಾಗಿರುವ ಶ್ರೀ ವಸಂತ ಶೆಟ್ಟಿ ಅವರಿಗೂ ಹಾಗೂ ಅಭಿಮತ ಬಳಗದ ಎಲ್ಲ ಸದಸ್ಯರಿಗೂ ಅಭಿನಂದನೆಯನ್ನು–ಅಭಿವಂದನೆಯನ್ನು ಈ ಮೂಲಕ ಸಲ್ಲಿಸುತ್ತಿದ್ದೇನೆ. ಪಂಡಿತರಾದ ಪುರುಷೋತ್ತಮ ಬಿಳಿಮಲೆ ಅವರ ಲೇಖನ ನಿಜಕ್ಕೂ ವಿಷಯ ವಿಸ್ತಾರ ಹಾಗೂ ಅಪೂರ್ವ ಪಾಂಡಿತ್ಯ ಪ್ರತಿಭೆಗಳಿಂದಾಗಿ ಎದ್ದು ಕಾಣುವ ಲೇಖನವಾಗಿ ವಿಶೇಷ ಸಂಚಿಕೆಯಲ್ಲಿ ಕಂಗೊಳಿಸುತ್ತಿದೆ. ಉಳಿದ ಎಲ್ಲ ಲೇಖನಗಳೂ ಸಮರ್ಪಕವಾಗಿ ಮೂಡಿ ಬಂದಿವೆ. ಮತ್ತೊಮ್ಮೆ ಅಭಿಮತದ ಎಲ್ಲ ಹಿರಿಯ, ಕಿರಿಯರಿಗೂ ನನ್ನ ಹಾರ್ದಿಕ ವಂದನೆಗಳು ಅ

*ಎನ್.ಪಿ. ಭಟ್, ಧಾರವಾಡ*

## ಅಭಿನಂದನೆ

### ಕರ್ನಾಟಕ ಭವನದ ನಿವಾಸಿ ಆಯುಕ್ತರಾಗಿ ಅತುಲ್ ಕುಮಾರ್ ತಿವಾರಿ



ಶ್ರೀ ಅತುಲ್ ಕುಮಾರ್ ತಿವಾರಿ, ಐಾ.ಆ.ಸೇ., ಪ್ರಧಾನ ಕಾರ್ಯದರ್ಶಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕರ್ನಾಟಕ ಸರ್ಕಾರ ಇವರು ಇದೇ ಡಿಸೆಂಬರ್ 2, 2015ರಂದು ದೆಹಲಿಯ ಕರ್ನಾಟಕ ಭವನದ ನಿವಾಸಿ ಆಯುಕ್ತರಾಗಿ ನೇಮಕಗೊಂಡಿದ್ದಾರೆ.

ಹಿಂದಿನ ನಿವಾಸಿ ಆಯುಕ್ತರಾಗಿದ್ದ ಶ್ರೀಮತಿ ವಂದನಾ ಗುರ್ನಾನಿ, ಭಾ.ಆ.ಸೇ., ಪ್ರಧಾನ ಕಾರ್ಯದರ್ಶಿಗಳು ಇವರು ಭಾರತ ಸರ್ಕಾರದ ಆರೋಗ್ಯ ಇಲಾಖೆಯಲ್ಲಿ ಜಂಟಿ ಕಾರ್ಯದರ್ಶಿ ಹುದ್ದೆಗೆ ವರ್ಗಾವಣೆಗೊಂಡಿರುತ್ತಾರೆ. ಇವರು 2010ರಿಂದ ದೆಹಲಿ ಕರ್ನಾಟಕ ಸಂಘದ ಕೆಲಸ ಕಾರ್ಯಗಳಿಗೆ ಮಹತ್ವದ ಸಹಕಾರ ನೀಡಿದ್ದರು. ಅವರಿಗೆ ಸಂಘ ಸದಾ ಚಿರಋಣಿ. ಅ

## ಸುಳಿಯ ಸೆಲೆ

ಕವನ

ಸುಳಿಯ ತುಂತುರುಗಳು ಒಂದನ್ನೊಂದು
ಗುರುತಿಸಿ ಜೊತೆಯಾಗಿ ಕೂಡಿ ಹರಿದು
ಸಮುದ್ರದೆಡೆಗೆ, ಹರಿಯುವದಲ್ಲವೇ

ಹರಿಯುತ್ತಾ ಅಲ್ಲಲ್ಲಿ ಹಸಿರುವ ಉಸುರಿನ ಜೀವಕ್ಕೆ
ನೆಲೆಗೆ ದಾರಿ ಮಾಡುವವಲ್ಲವೇ
ಇದೇ ಪ್ರಪಂಚದ ಅದ್ಭುತ ಹುಟ್ಟಲ್ಲವೇ

ನೀರಿನ ಝರಿಗಳು ಮಧುರವಾಗಿ ಹಾಡುತ್ತಾ
ಸಾಗುತ್ತಾ ಆಗಾಗ್ಗೆ ಅಂತರಾಳದ ಸುಳಿಗಳನ್ನೆಬ್ಬಿಸಿ
ನೂರ ನೂರೆಯಾಗಿ ರುದ್ರ ಸೌಂದರ್ಯವನ್ನು ಸೃಷ್ಟಿಸುತ್ತಲ್ಲವೇ

ಶಾಶ್ವತವಾಗಿ ಎಲ್ಲೂ ನಿಲ್ಲದೆ ವೈವಿಧ್ಯತೆಯೆಡೆಗೆ
ಸೆಳೆಯುತ್ತಲ್ಲವೇ ನದಿಯೆಡೆಗೆ
ಆಯಸ್ಕಾಂತದಂತೆ ಸೆಳೆಯುವ ಆಕ್ಷಣ ಅದ್ಭುತವಲ್ಲವೇ

ಮುಂದೆ ಮುಂದೆ ಸಾಗುತ್ತಾ ಬಂಡೆಗಳನ್ನು
ಕೊರೆಯುತ್ತಾ ಹೋಗುತ್ತಿರುವ ಈ
ನದಿಗೆ ಗುರಿ ಇಲ್ಲದಿಲ್ಲ.
ಅದಕ್ಕೆ ಅದರೇ ನಿಶ್ಚಿತ ಗುರಿ ಇದೆ.

ನಮ್ಮ ಎದೆಯೊಳದಲ್ಲಿ ಸುಳಿಗಳಿವೆ
ಪ್ರವಾಹದ ವಿರುದ್ಧ ದಿಕ್ಕಿನಲ್ಲಿ ಸಾಗುವ ಸುಳಿಗಳು.
ಹನಿ ಹನಿಯಾಗಿ ತನಿತನಿಯಾಗಿ ಭರವಸೆಯೆಂಬ
ಕಲ್ಲು ಚಪ್ಪಡಿಯನ್ನು ಎದೆಗೆ ಕಟ್ಟಿಕೊಂಡು
ಆ ಸುಳಿಗಳು ಈಸಬೇಕು
ಇದ್ದು ಜೈಸಬೇಕು – ಭಾವನಾ ಸುಳಿಗಳು!

*ಡಾ. ಅಹಲ್ಯಾ ಚಿಂತಾಮಣಿ*

## ಗೃಹಿಣಿಯರಿಗೆ ಸಲಹೆ

ಪ್ರಿಯ ದೆಹಲಿ ಕನ್ನಡಿಗರಿಗೆ, ಅದರಲ್ಲೂ ಮುಖ್ಯವಾಗಿ ಮಹಿಳೆಯರಿಗೆ ಇತ್ತೀಚಿನ ದಿನಗಳಲ್ಲಿ ದೆಹಲಿಯಲ್ಲಿ ನಡೆದ ಕೆಲವು ಸತ್ಯ ಘಟನೆಗಳನ್ನು ಆಧರಿಸಿ ಈ ನನ್ನ ಕಿವಿ ಮಾತು. ಕೊರೆಯುವ ಚಳಿಯಲ್ಲಿ ಮನೆ ತಣ್ಣಗಿರುತ್ತದೆ. ಎಷ್ಟು ಬಟ್ಟೆ ತೊಟ್ಟರೂ, ಮಂಚದ ಮೇಲೆ ಬೆಚ್ಚಗಿನ ಉಡುಪನ್ನು ಎಳೆದು ಮಲಗಿದರೆ ಸ್ವಲ್ಪ ಬೆಚ್ಚಗೆ ಅನ್ನಿಸುತ್ತದೆ. ಇನ್ನೂ ಚಳಿಯಾದರೆ ಬಾಗಿಲು ಪೂರ ಮುಚ್ಚುತ್ತೇವೆ, ಇನ್ನೂ ಹೆಚ್ಚು ಚಳಿಯಾದರೆ ಹೀಟರ್ ಬಳಸುತ್ತೇವೆ. ಆಗ ಬೆಚ್ಚಗೆ ಆಗುತ್ತಾ ಚಳಿಯ ಸವಿ ಸವಿಯುತ್ತೇವೆ, ಹಾಗೆ ನಿದ್ದೆ ಹೋಗುತ್ತೇವೆ ಬೆಳಗ್ಗಿನ ತನಕ. ಇದರ ಮಧ್ಯೆ ಏನು ಬೇಕಾದ್ರು ಆಗಬಹುದು. ಸ್ನೇಹಿತರೆ ದಯಮಾಡಿ ಮಲಗುವ ಮುನ್ನ ಕೆಲವು ಸೂಕ್ಷ್ಮವಾದ ವಿಷಯಗಳನ್ನು ನಾವು ಗಮನಿಸಿ ಅನುಸರಿಸಲೇಬೇಕು.

1. ಅಡುಗೆ ಮನೆಯಲ್ಲಿ ಅಡುಗೆ ಆದಮೇಲೆ ಸಿಲಿಂಡರಿನ ಮೆಯಿನ್ ಆಫ್ ಮಾಡಬೇಕು, ಅಡುಗೆ ಮನೆಗೆ ಹೊರಗಿನ ಗಾಳಿ ಬರುವಂತೆ ಅವಕಾಶ ಕಲ್ಪಿಸಿಕೊಡಬೇಕು.
2. ಮನೆಯಲ್ಲಿ ಎಷ್ಟೇ ಚಳಿಯಾದರೂ ಹೊರಗಿನ ಗಾಳಿ ಚಾಲನೆಗೆ ಅವಕಾಶ ಮಾಡಿಕೊಡಬೇಕು.
3. ಮಲಗುವ ಮುನ್ನ ಹೀಟರ್ ಆನ್ ಮಾಡಿಕೊಂಡು ಮಲಗಬೇಡಿ.
4. ಮನೆಯಲ್ಲಿ ಕೆಲವರು ಇದ್ದಿಲು ಅಥವಾ ಶಾಖಕೊಡುವ ಪದಾರ್ಥಗಳನ್ನು ಉಪಯೋಗಿಸಿ ಬೆಚ್ಚಗೆ ಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ದಯವಿಟ್ಟು ಹಾಗೆ ಮಾಡದಿರಿ. ಅ

*ಎಸ್. ಕುಮಾರ್*

‘ದೆಹಲಿ ಕರ್ನಾಟಕ ಸಂಘದ ಅಭಿಮತ’ ಸಂಘದ ಸದಸ್ಯರಿಗೆ ಸಂಘದಲ್ಲಿ ನಡೆಯುತ್ತಿರುವ ಕಾರ್ಯಕ್ರಮಗಳ ಮತ್ತು ಬೆಳವಣಿಗೆಗಳ ಕುರಿತು ಮಾಹಿತಿ ನೀಡಲು ಪ್ರಕಟವಾಗುತ್ತಿದೆ. ಅಲ್ಲದೇ ಸ್ಥಳೀಯ ಬರಹಗಾರರಿಗೆ ತಮ್ಮ ಸಾಹಿತ್ಯಿಕ ರಚನೆಗಳನ್ನು ಪ್ರಕಟಿಸಲೂ ಒಂದು ವೇದಿಕೆಯಾಗಿದೆ. ಅಭಿಮತದ ಕುರಿತಾದ ನಿಮ್ಮ ಸಲಹೆಗಳಿಗೆ ಸ್ವಾಗತ. ನಿಮ್ಮ ಬರಹಗಳನ್ನು ದೆಹಲಿ ಕರ್ನಾಟಕ ಸಂಘಕ್ಕೆ ಇಮೇಲ್ ಮೂಲಕ ಕಳುಹಿಸಬಹುದು. (**dksangha@gmail.com**) ಓದುಗರ ಪತ್ರಗಳನ್ನೂ ಇದೇ ಇಮೇಲ್ ವಿಳಾಸಕ್ಕೆ ಕಳುಹಿಸಿಕೊಡಬಹುದು. ಅ

*ಸಂಪಾದಕ ಮಂಡಳಿ*

# ಅಗಲಿದ ಹಿರಿಯ ಕನ್ನಡಿಗರಿಗೆ ಶ್ರದ್ಧಾಂಜಲಿ

## ವಿ.ಎಸ್. ಮಳೀಮಠ್



ಕರ್ನಾಟಕ ಹಾಗೂ ಕೇರಳ ಹೈಕೋರ್ಟಿನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಹಾಗೂ ಕರ್ನಾಟಕ ಗಡಿ ಸಂರಕ್ಷಣಾ ಆಯೋಗದ ಅಧ್ಯಕ್ಷ ಜಸ್ಟೀಸ್ ವಿ.ಎಸ್. ಮಳೀಮಠ್ ಅವರು ಡಿಸೆಂಬರ್ 22ರಂದು ನಿಧನ ಹೊಂದಿದರು. 1929ರಲ್ಲಿ ಜನಿಸಿದ ಇವರು ಪ್ರಥಮ ರ್‍ಯಾಂಕ್‌ನೊಂದಿಗೆ ಎಲ್.ಎಲ್.ಬಿ. ಡಿಗ್ರಿ ಪಡೆದು ಯುನಿವರ್ಸಿಟಿ ಆಫ್ ಲಂಡನ್‌ನಿಂದ 1952ರಲ್ಲಿ ಪೋಸ್ಟ್ ಗ್ರ್ಯಾಜುವೇಟ್ ಡಿಪ್ಲೋಮ ಇನ್ ಪಬ್ಲಿಕ್ ಇಂಟರ್ ನ್ಯಾಷನಲ್ ಲಾ ಮುಗಿಸಿದರು.

## ಎಸ್.ಡಿ. ಹಲಗೇಕರ್



ದೆಹಲಿ ಕನ್ನಡ ಸೀನಿಯರ್ ಸೆಕೆಂಡರಿ ಸ್ಕೂಲಿನ ಪ್ರಾಂಶುಪಾಲರಾದ (1981-1996) ಶ್ರೀ ಎಸ್.ಡಿ. ಹಲಗೇಕರ್ ಅವರು ಇದೇ ಡಿಸೆಂಬರ್ 31ರಂದು ನಿಧನರಾದರು. ಇವರು ಮೂಲತಃ ಕಾರವಾರದವರು. ಕರ್ನಾಟಕ ಸರ್ಕಾರದಲ್ಲಿ ಇನ್ಸ್‌ಪೆಕ್ಟರ್ ಆಫ್ ಸ್ಕೂಲ್ ಆಗಿ 1981ರಲ್ಲಿ ನಿವೃತ್ತರಾಗಿದ್ದರು. ಮಡದಿ ದಿ. ಸವಿತಾ ಹಲಗೇಕರ್ ಕೂಡಾ ದೆಹಲಿ ಕನ್ನಡ ಶಾಲೆಯಲ್ಲಿ ಹಿಂದಿ ಭಾಷಾ ಅಧ್ಯಾಪಕಿಯಾಗಿ ಸೇವೆ ಸಲ್ಲಿಸಿದ್ದರು.


**SAUJANYA** PRINTING PRESS

A HOUSE OF QUALITY PRINTING

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಪ್ರೆಸ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

C-95, Okhla Industrial Area Phase-I, New Delhi – 110 020

E-MAIL: saujanyapp2010@gmail.com / hpgp2006@gmail.com

PHONE: 011-40520770 MOBILE:9811104398,,9811604398

Delhi Karnataka Sangha Abhimatha Monthly,
Jan-2016, Vol. No.26, Issue No.4, Price Rs.1/- RNI Regn. No. 53405/91, DL-SW-1/4016/16-18
Printout Date : Jan 8th / 9th, Postal Date :10th / 11th, Total Pages-20
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.

